"Service of the Poor is the Service of God".

ವಾರ್ಷಿಕ ಚಂದಾ ಒಂದು ರೂಪಾಯಿ ಮಾತ್ರ!!! ಅಂಚೆವೆಚ್ಚ ನಾಲ್ಕಾಣೆ.

A HIGH CLASS RUPEE-MAGAZINE TO SUIT ALL INTERESTS.

ಭಿನ್ನರುಚಿಗೊಪ್ಪುವ ಕನ್ನಡ ಮಾಸಪತ್ರಿಕೆ. [ಬಿಡಿ ಸಂಚಿಕೆ ಆಣೆ ೦—೧—೬.

ಓಂ

BADAVARA BANDHU

ಬಡವರಬಂಧು

EDITOR:—MANGALORE JARAPPA. ASSOCIATE EDITOR:—B. NARSAPPA.

ಸಂಪುಟ ೧. | ತಾರೀಕು ೧ನೇ ಜೂನ್ ೧೯೩೨. | ಸಂಚಿಕೆ ೨

ನಮ್ಮ ಚಂದಾದಾರರಿಗೊಂದು ಮಾತು.

ಸಂಚಿಕೆಯು ಪ್ರತಿ ತಿಂಗಳ ೧ನೇ ತಾರೀಕಿನ ದಿನ ಹೊರಡುವುದು. ಸಂಚಿಕೆಯು ಒಂದು ವೇಳೆ ತಲಪದೆ ಹೋದರೆ ತಿಂಗಳ ೧೫ನೇ ತಾರೀಕಿನೊಳಗೆ ಬರೆದುಕೊಳ್ಳಿರಿ. ನಮ್ಮೊಡನೆ ಮಾಡಲಿರುವ ಎಲ್ಲಾ ಪತ್ರವ್ಯವಹಾರಗಳಲ್ಲೂ ನಿಮ್ಮ ಚಂದಾ ನಂಬರನ್ನು ಖಂಡಿತವಾಗಿ ಬರೆಯಿರಿ.

ಲೇಖಕರಿಗೆ ಸೂಚನೆ.

ನಮಗೆ ಕಳುಹಲ್ಪಡುವ ಕಥೆ ಮೊದಲಾದ ವಿಷಯಗಳು "ಬಡವರಬಂಧು"ವಿನ ಒಂದು ಪುಟಕ್ಕೆ ಮೀರಬಾರದೆಂಬ ನಿಯಮವಿದೆ.

ಬರುವ ಸಂಚಿಕೆಯಲ್ಲಿ ಮಹಾತ್ಮಾ ಗಾಂಧಿಯವರು ದೇವರ ಇರುವಿಕೆಯು ಕುರಿತು ಗ್ರೇಮಫೋನಿಗೆ ಕೊಟ್ಟ ಉದಾತ್ತ ಸಂದೇಶವನ್ನು ಪ್ರಕಟಿಸುವೆವು. ಅಲ್ಲದೆ, ಶ್ರೀಯುತ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರೇ ಮೊದಲಾದ ಸುಪ್ರಸಿದ್ಧ ಲೇಖಕರ ಪದ್ಯಗದ್ಯಗಳು ಬರುವುವು.

ಮೆನೇಜರ್.

ಅನುಕ್ರಮಣಿಕೆ.

"BADAVARA BANDHU"

ಬಡವರ ಬಂಧು

ESTABLISHED 1932.

ಸಂಪುಟ ೧. | ತಾರೀಕು ೧ ಜೂನ್ ೧೯೩೨. | ಸಂಚಿಕೆ ೨.

ಬಡತನವೆಲ್ಲಿ?

ಒಬ್ಬ ಬಡ ಮನುಷ್ಯನು ಒಂದು ಗುಡಿಸಲನ್ನು ಕಟ್ಟಿದ. ಅದರಲ್ಲಿ ತುಂಬಿಕೊಂಡ ಇಲಿಗಳನ್ನು ಕೊಲ್ಲುವುದಕ್ಕಾಗಿ ಒಂದು ಬೆಕ್ಕನ್ನು ಸಾಕಿದ. ಆ ಬೆಕ್ಕಿಗೆ ಹಾಲು ಕೊಟ್ಟು ಸಾಕುವುದಕ್ಕಾಗಿ ಒಂದು ದನವನ್ನು ತಂದ. ಆ ದನದ ಹಾಲು ಕರೆಯುವುದಕ್ಕಾಗಿ ಒಂದು ಮದುವೆಯಾದ......ಸ್ವಲ್ಪ ಸಮಯದಲ್ಲಿ ಅವನ ಪೂರ್ವ ಸುಖದ ನೆಲೆಯು ಮಣ್ಣುಪಾಲಾಯಿತು. ಹೀಗೆ ಅವನ ಒಂದು ಬೆಕ್ಕಿನ ದೆಸೆಯಿಂದ ಹಲವು ಸುಖೋಪಭೋಗ ವಸ್ತುಗಳುತ್ಪನ್ನವಾದುವು--ಕಷ್ಟಕ್ಕೆ ಸಿಲುಕಿದ--ಇದಕ್ಕೆ ಕಾರಣವಾದರೂ ಏನು? ಅನಗತ್ಯವಾದ ಅವನ ಅಭಿಲಾಷೆ.

ಮನುಷ್ಯನ ಆಶಾಸರೋವರವು ಬತ್ತುವುದೇ ಇಲ್ಲ. ಇಚ್ಛಿತ ವಸ್ತುವು ದೊರೆವ ತನಕ ಆಶೆಯು ಕುದುರೆಯು ಮುಂದೋಡುವುದಿಲ್ಲ. ದೊರೆತೊಡನೆ, ಮನಸ್ಸು ನಾಗಾಲೋಟದಿಂದ ಮತ್ತೊಂದು ವಸ್ತುವಿನ ಭೂಮಿಗೆ ಓಡುತ್ತದೆ.

ಒಬ್ಬ ಬಡವನಿದ್ದ. ಒಂದು ದಿನ ಮಹಾರಾಜನು ಆನೆಯ ಮೇಲೆ ಕುಳಿತು ಸವಾರಿಮಾಡುವುದನ್ನು ನೋಡಿ "ಲಕ್ಷಗಟ್ಟಳೆ ರೂಪಾಯಿ ಬೆಲೆಬಾಳುವ ಪ್ರಾಣಿ! ನನಗೆ ಸಿಗುತ್ತಿದ್ದರೆ......" ಎಂದ. ಅವನ ಈ ಮಾತನ್ನು ಒಬ್ಬ ಗುಪ್ತಚಾರನು ಕೇಳಿ, ಮಹಾರಾಜನಿಗೆ ತಿಳಿಯಲೆಳಸಿದ. ಮಹಾರಾಜನು ಒಡನೆ ಒಂದು ದೊಡ್ಡ ಆನೆಯನ್ನು ಬಡವನಿಗೆ ಬಹುಮಾನವಾಗಿ ಕಳುಹಿಸಿದ. ಪಾಪ! ಆ ಆನೆಯನ್ನು ಬಡವನೇನು ಮಾಡಲಾಪನು? ತನ್ನ ಇಷ್ಟು ಸಣ್ಣ ಹೊಟ್ಟೆಯನ್ನು ತುಂಬಿಸಲಸಮರ್ಥನಾದ ಅವನು ಆ ಆನೆಯ ಅಷ್ಟು ದೊಡ್ಡ ಹೊಟ್ಟೆಯನ್ನು ದಿನಂಪ್ರತಿ ತುಂಬಿಸಲು ಹೇಗೆ ಸಮರ್ಥನಾಗಲಾಪನು? ಆ ಬಡವನು ತನ್ನ ಮೌಢ್ಯಕ್ಕಾಗಿ ಕೊರಗಿದ—ಮರುಗಿದ. ಇದು ಬಡವನ ದುರಾಭಿಲಾಶೆಯ ಪರಿಣಾಮ.

ಇತ್ತಲಾಗೆ ಒಬ್ಬ ಬಡವನ ಮಗಳಿಗೆ ವಿವಾಹವಾಯಿತು. ಹುಡುಗಿಯು ಸ್ವಲ್ಪ ಸುಂದರಿಯಾಗಿದ್ದುದರಿಂದ ಸತ್ಕುಲದ ವರನು ದೊರಕಿದ. ಬಡ ಲೇಸುಕರ್ತೃವಿನ ಗತಿಯೇನು? ಕೋಪರೇಟಿವ್ ಸೊಸ್ಯಾಟಿ, ಕುರಿಫಂಡು, ಸಾಲಸೋಲಗಳಲ್ಲಿ ಮುಳುಗಿ ಹಣ ಘಳಿಸಿ, ತನ್ನ ದಾರಿದ್ರ್ಯವನ್ನು ಮರೆಮಾಜಿಸಿ ಬಹು ವಿಜೃಂಭಣೆಯಿಂದ ಮಗಳಿಗೆ ವಿವಾಹ ಮಾಡಿದ. ಆದರೆ ವಿವಾಹದ ಮರುದಿನ ನೋಡುತ್ತಾನೇನನ್ನು? ಸುತ್ತಲೂ ಸಾಲದ ಉಗ್ರ ಬೆಂಕಿ! ಎಲ್ಲೆಲ್ಲೂ ಸಾಲಿಗರು!! ಐಶ್ವರ್ಯವಂತರ ಕ್ರಮವನ್ನು ಅನುಸರಿಸಿ, ಅವರನ್ನು ಸಂತೋಷಗೊಳಿಸುವುದಕ್ಕಾಗಿ ಎಂತಹ ಸಾಲಕ್ಕೆ ತುತ್ತಾದ!

ಬಡವರು ತಮ್ಮ ಬಡತನವನ್ನಡಗಿಸಿಟ್ಟು ಅಂತಹ ತಮ್ಮ ಪುಕ್ಕತನದ ವರ್ತನೆಯಿಂದಾಗಿ ಕಷ್ಟಕ್ಕೊಳಗಾಗುವುದು ಬರೇ ಮೂಡತನವು. ಹಾಗೆ ಮಾಡುವುದರ ಬದಲಿಗೆ ತಮ್ಮ ನಿಜಸ್ಥಿತಿಯನ್ನು ಬಯಲಿಗಿಟ್ಟು ಅದಕ್ಕನುಸಾರವಾಗಿ ವರ್ತಿಸಿದರೆ ಯಾರ ಯಾವ ಭೀತಿಯೂ ಇರಲಾರದು. "ಬಡತನವೆಲ್ಲಿ?" ಎಂಬ ಪ್ರಶ್ನೆಗೆ "ಬಡತನವು ಒಬ್ಬನ ದ್ರವ್ಯ ವಿನಿಯೋಗದ ಅಕ್ರಮದಲ್ಲಿ; ಅಸಾಧ್ಯವಾದ ಅಭಿಲಾಷೆಯಲ್ಲಿ" ಎಂಬುದೇ ಉತ್ತರವು.

ಪ್ರಾರ್ಥನೆ.

ಬಿರುಗಾಳಿ ಬೀಸುತಿದೆ,
ನಾವೆಯಿದು ಮುಳುಗುತಿದೆ;
ದಾರಿಗಾಣೆ,
ನಾನು ನಿನ್ನ ಕಾಣೆ.

ಅಗಗೊ! ತೆರೆಯದು ಹಾರಿ
ನ್ಮೆಮೇಲೆ ಬಹು ಬಾರಿ
ಬೀಳುತಿದೆಯ್ಯೊ
ದೇವ ಪೊರೆಯ ಬಾರೈ.

ಕಂದ ಮಾಡಿದ ತಪ್ಪ
ಒಂದು ಸಲ ಮರೆಯಪ್ಪ
ದೇವ ದೇವ!
ಬಾರೊ ನನ್ನ ಜೀವ!

ಬೆಳಕ ತೋರಿಸು ಎನಗೆ,
ಮಣಿವೆ ನಿನ್ನಯ ಪದಕೆ
ಪೊರೆಯೊ ತಂದೆ,
ತಂದೆ ಬಹಳ ನೊಂದೆ.

ಬಿ. ನರ್ಸಪ್ಪ.

ವಾಚಿನ ಒಗಟು.

ಅದು ಯಾವ ದಿವಸವೋ,--ಚೆನ್ನಾಗಿ ನೆನಪಿಲ್ಲ.

ಅಂತೂ ಅದು ಖಜಾನೆಗೆ ಹಣ ಕಟ್ಟಿದ ಒಂದು ದಿನಸ.

ಮೂಗುವಳ್ಳಿ ಪಟೇಲರು ಆ ದಿನ ಬೆಳಿಗ್ಗೆ ಬೇಗ ಊಟ ತೀರಿಸಿ, ಎರಡು ಮೈಲು ದೂರದ ತಾಲೂಕಿಗೆ ಹೊರಟಿದ್ದರು. ದಾರಿಯಲ್ಲಿ ಬರುತ್ತಾ, ಅವರಿಗೆ ಗುರುತಿನವರು ಕೆಲವರು ಸಿಕ್ಕಿದರು. ನಮ್ಮ ಪಟೇಲರಿಗೆ ಮಾತಿಗೆ ಯಾರಾದರೂ ಸಿಕ್ಕಿದರೆ ಸರಿ; ಬೈಗಾದದ್ದೂ ಗೊತ್ತಿಲ್ಲ; ಬೆಳಗಾದದ್ದೂ ಗೊತ್ತಿಲ್ಲ. ಮಾತಾಡುವುದೊಂದೇ. ಹೀಗಾಗಿ ಅವರು ತಾಲೂಕಿಗೆ ಬರುವಾಗ ಖಜಾನೆಯ ಸಮಯ ಆಗುತ್ತಾ ಬಂದಿತ್ತು. ಸರಾಫರು ಹಣದ ರಾಶಿಯಲ್ಲಿ ಬಿದ್ದು ಹೊರಳುತ್ತಾ, ಉರುಳುತ್ತಾ, ಎಣಿಸುತ್ತಾ, ಗುಣಿಸುತ್ತಾ, ಕುಣಿಸುತ್ತಾ ಇದ್ದರು. ಪಟೇಲರು ಬಂದವರೇ "ನಮಸ್ಕಾರ ಸ್ವಾಮಿ!" ಎಂದರು. ಸರಾಫರು—"ಯಾರು? ಮೂಗುವಳ್ಳಿ ಪಟೇಲರೇ? ಇನ್ನು ನಾಳೆ ಬನ್ನಿ; ಈಗ ಹೊತ್ತಾಯಿತು" ಎಂದರು. ಆ ದಿನ ಸರಾಫರಿಗೆ ಬಹಳ ಬೇಸರ. ಅಂದು ಅವರಿಗೆ ಚಿಕ್ಕಾಸೂ ಗಿಟ್ಟಿರಲಿಲ್ಲ. ಅಂದು ಗ್ರಹಚಾರದಿಂದ ಸಮೀಪದಲ್ಲಿಯೇ ಶಿರಸ್ತೇದಾರರು;—'ಮಾಮೂಲು' ಕೇಳಲಿಕ್ಕಾಗಲೀ, ಕಾಫಿ ಕುಡಿಸಿರೆನ್ನಲಿಕ್ಕಾಗಲೀ ಅಥವಾ "ಸ್ಪೆಶಲ್" ಆಗಿ ಹೊಲಿಸಿದ್ದ ಆ ಅಂಗಿಯ ದೊಡ್ಡ ತೋಳಿನೊಳಗೆ ಒಂದೆರಡು ರೂಪಾಯಿಗಳನ್ನು (ಎಣಿಸುವಾಗ) ಒಳಗೆ ತೂರಿಸಿ "ಹಣ ಕಡಿಮೆ ಬಂತೆ"ಂದು ಅದನ್ನು ವಸೂಲ್ಮಾಡಲಿಕ್ಕಾಗಲೀ ಯತ್ನವಿಲ್ಲ. ನಿತ್ಯಗಟ್ಟಲೆಯಲ್ಲಿ ಮಾಮೂಲೆಂತಲೂ, ಅಂಗೀ ತೋಳಿನ ಸಂಭಾವನೆಯೆಂತಲೂ ಒಂದೆರಡು ವರಹಗಳಿಗೆ ಕಡಿಮೆಯಾಗಿ ಸಂಪಾದಿಸದ ನಮ್ಮ ಸರಾಫರಿಗೆ ಇಂದು ಚಿಕ್ಕಾಸಿನ ಫಾಯಿದೆಗೂ ಗತಿ ಇಲ್ಲವೆಂದರೆ—ಎಂತಹ ದುರದೃಷ್ಟ! ಅದೇ ಅವರು ಮೂಗುವಳ್ಳಿ ಪಟೇಲರಿಗೆ ಹಾಗೆ ಖಂಡಿತವಾಗಿ ಹೇಳಿಬಿಟ್ಟರು.

ಕೊನೆಗೆ ಹಾಗೂ ಹೀಗೂ ದಮ್ಮಯ್ಯ ಹಾಕಿ, ಪಟೇಲರು ಹಣ ಕಟ್ಟಿದರು. "ಒಂದು ವಾಚ್ ಇಲ್ಲದೆ ಸಮಯವೇ ಗೊತ್ತಾಗುವುದಿಲ್ಲ. ವಾಚ್ ಇದ್ದರೆ ಈ ಸರಾಫರ ಹಂಗಿಲ್ಲ. ಒಂದು ವಾಚ್ ಬೇಕು" ಎಂದು ಅಂದೇ ನಿರ್ಧಾರ ಮಾಡಿದರು ಪಟೇಲರು.

ಪಟೇಲರು ಒಂದು ವಾಚ್ ಕೊಳ್ಳುವ ಯೋಚನೆ ಮಾಡಿದರು. ಅವರ ನೆರೆಕರೆಯವರಿಗೆ ಒಂದು ಪತ್ರಿಕೆ ಬರುತ್ತಿತ್ತು. ಅದರಲ್ಲಿ ವಾಚಿನ ಜಾಹಿರಾತೂ, ಅದರೊಂದಿಗೆ ಬಹುಮಾನಗಳೂ ಇದ್ದುವು. ಪಟೇಲರು ಅದನ್ನು ನೋಡಿ ಆ ಕಂಪೆನಿಗೆ ಬರೆದರು.—ಇರುಳಪ್ಪನ ಬೀದಿಯ ಮುರುಳಪ್ಪನ ಕಂಪೆನಿಗೆ.

ಯಥಾ ಸಮಯದಲ್ಲಿ ವಾಚು ಬಂತು. ಪಟೇಲರು ೨ ಮೈಲು ದೂರದ ಪೋಸ್ಟಾಫೀಸಿಗೆ ಖುದ್ದಾಗಿ ಹೋಗಿ, ವಾಚನ್ನು ಪಡೆದರು. ಬಹುಮಾನವಾಗಿ ಮಣ್ಣು ಹಿಡಿದ ಮುರುಕು ಗುಂಡು ಸೂಜಿಗಳು, ಬರೆದು ಬಿಸಾಡಿದ ನಿಬ್ಬು

ಗಾಂಧೀ ತತ್ವ.

೧. ಮನೆಯ ಕ್ಷೇಮ ಚಿಂತನೆಯು ಯಾವ ರಾಷ್ಟ್ರದಲ್ಲಿರುವುದಿಲ್ಲವೋ ಆ ರಾಷ್ಟ್ರವು ಹೆಚ್ಚು ಕಾಲ ಸ್ಥಿರವಾಗಿ ನಿಲ್ಲಲಾರದು.

೨. ನಮ್ಮಲ್ಲಿನ ಬಡತನವೂ ಬಾಲ್ಯವಿವಾಹ ಪದ್ಧತಿಗಳೂ ಹಿಂದೂ ಧರ್ಮದ ಬಲಹೀನತೆಗೆ ಪ್ರಬಲ ಕಾರಣಗಳು.

೩. ಸುಧಾರಣೆಯ ಆವಶ್ಯಕತೆಯನ್ನು ಯಾರು ಬೋಧಿಸುತ್ತಾರೋ ಅಂತಹ ಬೋಧಕರೇ ಮೊದಲು ತಮ್ಮಲ್ಲಿ ಸುಧಾರಣೆಗಳನ್ನು ಮಾಡಿಕೊಂಡು ಅನಂತರ ತಮ್ಮ ನೆರೆಹೊರೆಯವರಲ್ಲಿ ಅವುಗಳನ್ನು ಬಿತ್ತಬೇಕು.

೪. ಸತ್ಯ, ಬೆಳಕು, ಪ್ರೇಮ ಇವೇ ದೇವರು.

ಗಳು, ಮೊಹರು ಒತ್ತಿದ ಕಾಲಾಣೆಯ ಸ್ಟಾಂಪುಗಳು, ಒಡೆದುಹೋದ ಪಿಂಗಾಣಿ ಪಾತ್ರದ ತುಂಡುಗಳು—ಇದ್ದುವು.

ಪಟೇಲರು, ವಾಚಿಗೆ, ಪೋಸ್ಟ್‌ಮಾಸ್ಟರರ ಕೈಯಿಂದ ಕೀಲಿ ಕೊಡಿಸಿ, ಕಿಸೆಯಲ್ಲಿ ಅದನ್ನು ತುಂಬಿಸಿಕೊಂಡು, ಮನೆಗೆ ಹೊರಟರು. ವಾಚು ಆಕಾರದಲ್ಲಿ "ಬಿ" ಟ್ವಿನ್‌ಪೀಸಿನ ಖಾಸಾ ತಮ್ಮ!

ಪಟೇಲರು ಮನೆಗೆ ಬರುವಾಗ ಏನೋ ಗದ್ದಲ. ಪಟೇಲರ ಹೆಂಡತಿ, ಸೊಪ್ಪು ತಂದು ಕೊಟ್ಟಿಗೆಗೆ ಹಾಕುವಾಗ ಅಲ್ಲೊಂದು "ಭುಸ್ ನಾಗಪ್ಪ"! "ನಾಗಪ್ಪಾ! ಹೋಗಪ್ಪಾ! ನಿನಗೆ ನಾಳೆಯೇ ತನಿ ಎರೆಸುತ್ತೇನೆ" ಎಂದು ಪಟೇಲರ ಹೆಂಡತಿಯೂ ಬೇಡಿಕೊಂಡರು. ಪಟೇಲರೂ ಹರಿಕೆ ಹೊತ್ತರು. ನಾಗಪ್ಪನು, ಕೊಟ್ಟಿಗೆಯನ್ನು ಬಿಟ್ಟು, ಮನೆಯ ಅಡಿಯಲ್ಲಿದ್ದ ಒಂದು ಹೆಗ್ಗಣದ ಹೋರಿಗೆ ಹೊಕ್ಕನು.

ರಾತ್ರಿ ೨ ಗಂಟೆಯ ಸಮಯ; ಛಳಿಗಾಲದ ರಾತ್ರಿ. ವಿಪರೀತ ಚಳಿ. ಎಲ್ಲರಿಗೂ ಒಳ್ಳೆಯ ನಿದ್ರೆ. ಪಟೇಲರೂ ಗೊರಕೆ ಹೊಡೆಯುತ್ತ, ಆಚೆ ಈಚೆಗೆ ಹೊರಳುತ್ತಿದ್ದಾರೆ. ಹಠಾತ್ತಾಗಿ ಅವರ ಕೈಗೆ ತಣ್ಣಗಾದ ಒಂದು ವಸ್ತುವಿನ ಸ್ಪರ್ಶವಾಯಿತು. ಪಟೇಲರಿಗೆ ಕೊಂಚ ಎಚ್ಚರವಾಯಿತು. ಅಂದೇ ಸಂಜೆ ಮನೆಯ ಹೋರಿನಲ್ಲಿ ನಾಗಪ್ಪನು ಸೇರಿಕೊಂಡದ್ದನ್ನು ಅವರು ಕಣ್ಣಾರೆ ಕಂಡಿದ್ದರು. ಅವನೀಗ ಮೆಲ್ಲಗೆ ಮಲಗುವ ಮನೆಯನ್ನು ಸೇರಿರಬಹುದೇ? ಕಚ್ಚಿದರೇನು ಗತಿ? ಕಚ್ಚದಂತೆ ಏನು ಉಪಾಯ? ಪಟೇಲರು ಕೂಡಲೇ ಹೊದ್ದ ಕಂಬಳಿಯನ್ನು, ತಣ್ಣಗೆ ತಗಲಿದ ಆ ವಸ್ತುವಿದ್ದಲ್ಲಿ ಎಸೆದರು. "ದೀಪ ಹಚ್ಚೇ" ಎಂದರು.

ದೀಪ ಹಚ್ಚಿದ್ದಾಯಿತು. ದೊಡ್ಡದೊಂದು ದೊಣ್ಣೆ ತಂದು ನಾಗಣ್ಣನನ್ನು ಚೆನ್ನಾಗಿ ಬಡಿದದ್ದಾಯಿತು. 'ನಾಗಣ್ಣ ಸತ್ತ, ಬದುಕಿರಲಾರ' ಎಂದು ಧೈರ್ಯಮಾಡಿಕೊಳ್ಳುವಷ್ಟರಲ್ಲಿ, ದೊಣ್ಣೆಯ ಕೊನೆಯ ಏಟಿನ ಫಲವಾಗಿ "ಗ್ಲಾಸು" ಒಡೆದ ಶಬ್ದ ಕೇಳಿಸಿತು. ಪಟೇಲರು ಗಾಬರಿಯಾದರು.

ಮಲಗುವ ಸಮಯದಲ್ಲಿ ಪಟೇಲರು ವಾಚನ್ನು ತಮ್ಮ ಹಾಸಿಗೆಯ ಮಗ್ಗಲಲ್ಲಿಯೇ ಇಟ್ಟುಕೊಂಡು ಮಲಗಿದ್ದರು. ಅದು ಚಳಿಯಿಂದ ತಣ್ಣಗಾಗಿತ್ತು. ಅದು ಹಾಸಿಗೆಯ ಪಕ್ಕದಲ್ಲಿ ಉಂಟೆಂದು ಮರೆತು ಹೋಗಿತ್ತು. ನಾಗಣ್ಣನ ಕಥೆ ಮಾತ್ರ ಚೆನ್ನಾಗಿ ನೆನಪಿತ್ತು. ಕೊನೆಗೆ ನೋಡಲಾಗಿ, ದೊಣ್ಣೆಯ ಪೆಟ್ಟು ತಿಂದು ಸತ್ತದ್ದು ನಾಗಣ್ಣನಲ್ಲ; ವಾಚು! ತಣ್ಣಗಿದ್ದವನು ನಾಗಣ್ಣನೇ ಎಂದು ಹೊಡೆದದ್ದು ವಾಚಿಗೆ.

ಮಾಗಣೆ ಶ್ಯಾನುಭಾಗರಿಗಾದರೂ, ದರಖಾಸ್ತುಗಳಲ್ಲಿ, ಆಸ್ತಿ ವಿಕ್ರಯಗಳಲ್ಲಿ, ಅದರಲ್ಲಿ, ಇದರಲ್ಲಿ ಸಂಭಾವನೆ ಉಂಟು. ಇಂತಹ ಹತ್ತು ವಾಚು ಒಡೆದರೂ ಚಿಂತ್ಯವಿಲ್ಲ! ಆದರೆ ಪಟೇಲರಿಗೆ ಅಂತಹ ಆದಾಯ ಒಂದೂ ಇಲ್ಲ. "ಹಾಕಿದ ಹುಲ್ಲು, ಕಟ್ಟಿದ ಗೂಟ!" ಹಾಗಾದರೆ ಬದಲಿಗೆ ಬದಲು ವಾಚನ್ನು ಕಾಸು ಕೊಡದೆ, ನಮ್ಮ ಪಟೇಲರು ಹೇಗೆ ಸಂಪಾದಿಸಬೇಕು?—ಯಾರಾದರೂ ಈ ಒಗಟನ್ನು ಬಿಚ್ಚಬಲ್ಲರೇ?

ಹುರುಳಿ ಭೀಮರಾವ್.

ಎಳೆ ಮಕ್ಕಳ ಸಾಧಾ ಜ್ವರಕ್ಕೆ—ಭದ್ರಮುಷ್ಟಿ, ಅತಿವಿಡೆ, ಓಮ, ಇವುಗಳನ್ನು ಸಮಭಾಗ ತಕ್ಕೊಂಡು ಪುಡಿಮಾಡಿ ೨ ಗುಂಜಿಯಷ್ಟು ಜೇನುತುಪ್ಪದೊಡನೆ ಕೊಡಬೇಕು.

ಆರೋಗ್ಯವೂ ಅದನ್ನು ಪಡೆಯುವ ವಿಧವೂ.

ಡಾಕ್ಟರ್ ಚಾರ್ಲ್ಸ್ ಹೂಪರ್, ಡಾಕ್ಟರ್ ಡಿ ಅಲೀನೀ, ಐಡಾಹೋ, ಯು. ಎಸ್. ಎ.

ಆರೋಗ್ಯವನ್ನು ಕುರಿತು ಹಲವು ವಿಷಯಗಳನ್ನು ನಾನು ಇಲ್ಲಿ ಹೇಳುವುದು ತಪ್ಪಾಗದೆಂದು ಎಣಿಸುವೆನು.

ಆರೋಗ್ಯವೆಂಬುದೇನು? ಯಾವನು ಅತಿ ತೀವ್ರವಾದ ವ್ಯಾಧಿ, ದುರ್ಬಲತೆ ಮುಂತಾದುವಿಲ್ಲದೆ ಇರುವನೋ, ಯಾವನ ದೇಹದಲ್ಲಿ ಯಾವ ವಿಧವಾದ ಕೊರತೆಗಳೂ ಇಲ್ಲವೋ, ಯಾವನ ದೇಹಾವಯವಗಳು ತಮ್ಮ ತಮ್ಮ ಕಾರ್ಯಗಳನ್ನು ಸರಿಯಾಗಿ ನಡೆಸಿಕೊಂಡು ಬರುವುವೋ, ಯಾವನು ತನ್ನ ಕಾರ್ಯವನ್ನು ಸುಲಭವಾಗಿ ಮುಗಿಸಬಲ್ಲನೋ, ಯಾವನಿಗೆ ತನ್ನ ಜೀವಿತಕಾಲವು ಪ್ರಿಯವೆನಿಸಿದೆಯೋ ಅವನ ದೇಹಸ್ಥಿತಿಯೇ ಆರೋಗ್ಯವೆನಿಸುವುದು. ಆದರೆ, ಆರೋಗ್ಯಕ್ಕೂ, ದೀರ್ಘಾಯುಸ್ಸಿಗೂ ಯಾವ ಸಂಬಂಧವೂ ಇಲ್ಲ. ಕೆಲವರು ಒಳ್ಳೆಯ ಆರೋಗ್ಯವಂತರಾಗಿದ್ದರೂ ಅಲ್ಪಾಯುಸ್ಸುಳ್ಳವರಾಗಿರುವರು. ಮತ್ತು ಕೆಲವರು ಅನೇಕ ವ್ಯಾಧಿಗಳಿಂದ ಪೀಡಿತರಾಗಿದ್ದರೂ ಬಹುಕಾಲ ಜೀವಿಸಿರುವರು. ವ್ಯಾಧಿಯಿಂದ ಪೀಡಿತರಾದವರನ್ನು ಸತ್ತುಹೋಗಬೇಕೆಂದು ನಾವು ಪ್ರಾರ್ಥಿಸಿದರೂ, ಯಾವುದೋ ಒಂದು ಶಕ್ತಿಯು ಅವರನ್ನು ಮೃತರಾಗದಂತೆ ತಡೆಯುವಂತಿದೆ. ಆರೋಗ್ಯಕ್ಕಿಂತ ದೀರ್ಘಾಯುಸ್ಸಿಗೆ ಎರಡು ವಿಧವಾದ ಕಾರಣಗಳು ಅಧಿಕವಾಗಿರುವುವೆಂದು ನನಗೆ ತೋರುವುದು. ೧. ಯಾವಾಗಲೂ ದೇವರಲ್ಲಿ ಭಕ್ತಿಯನ್ನಿಡುವುದು. ೨. ಜೀವಿಸುವುದಕ್ಕೆ ಯಾವುದಾದರೊಂದನ್ನು ಮಾಡುತ್ತಿರುವುದು. ಭಗವಂತನಲ್ಲಿ ಯಾವನು ಭಕ್ತಿಯನ್ನಿಡುವನೋ, ಇವನಿಗೆ ಆ ಪರಮಾತ್ಮನ ಸ್ಥೈರ್ಯ, ಬಲ, ಅನಾಶನ ಇವೆಲ್ಲವೂ ತಾವಾಗಿಯೇ ಸಿದ್ಧಿಸುವುವು. ಆದುದರಿಂದ ಆ ದೈವಬಲದಿಂದ ಪ್ರತಿ ಸ್ತ್ರೀಪುರುಷರಿಗೂ ಸ್ವಲ್ಪವಾದರೂ ಆ ದೈವದ ಶಕ್ತಿಯೂ, ಬಲವೂ ಲಭಿಸುವುದು. ಯಾವನು ಒಂದು ಕಾರಣಾರ್ಥವಾಗಿ ಜೀವಿಸಿರುವನೋ, ಯಾವನಿಗೆ ಒಂದು ಕಾರ್ಯವು ನಿರ್ಣಯವಾಗಿ ಏರ್ಪಟ್ಟಿರುವುದೋ, ಯಾವನಿಗೆ ಒಂದು ಉದ್ದೇಶವು ನೆರವೇರಬೇಕೆಂಬ ದೃಢಾಭಿಲಾಷೆಯಿದೆಯೋ, ತನಗೆ ಪ್ರಿಯನಾದ ಒಬ್ಬನಿಗೆ ಒಂದು ಒತ್ತಾಸೆಮಾಡಬೇಕೆಂದಿರುವುದೋ ಅವನಿಗೆ ಮೇಲೆ ಹೇಳಿದುವೊಂದೂ ಇಲ್ಲದಿರುವವನಿಗಿಂತ ಆಯುಸ್ಸು ನೀಡಿಸಿಯೇ ಇರುವುದು. ದೈವಭಕ್ತಿಯುಳ್ಳವರೂ, ಲೋಕೋಪಕಾರಿಗಳೂ ಸಾಧಾರಣವಾಗಿ ಒಳ್ಳೆಯ ಆರೋಗ್ಯದಿಂದಿಲ್ಲದೆ ಇದ್ದರೂ, ಬಹುಕಾಲದ ವರೆಗೆ ಜೀವಿಸಿರುವರು.

ಆದರೂ ಪ್ರತಿಯೊಬ್ಬರೂ ಒಳ್ಳೆಯ ಆರೋಗ್ಯವನ್ನು ಬಯಸಬೇಕು. ಆರೋಗ್ಯದಿಂದಿದ್ದಾಗ ಭಗವಂತನನ್ನು ಪೂಜಿಸಿ, ಅವನಿಗೆ ವಂದನೆಮಾಡಬೇಕು. ಒಳ್ಳೆಯ ಆರೋಗ್ಯವಂತರಾಗಿಲ್ಲದೆ ಹೋದಾಗ, ಅದನ್ನು ಪಡೆಯುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡಬೇಕು. ನಮಗೆ ಒಳ್ಳೆಯ ಆರೋಗ್ಯವಿದ್ದರೆ, ನಮ್ಮ ಕಾರ್ಯಗಳನ್ನು ಸರಿಯಾಗಿ ನಡೆಸಬಲ್ಲೆವು. ಮನಸ್ಸಿಗೂ ಉತ್ಸಾಹವಿರುವುದು. ವ್ಯಾಧಿಪೀಡಿತರಾಗಿದ್ದರೆ ಯಾವುದೂ ಸಾಧ್ಯವಾಗುವುದಿಲ್ಲ.

ಪ್ರಕೃತಿನಿಯಮಕ್ಕೆ ಒಳಪಟ್ಟು ನಡೆಯುವುದರಿಂದ ಒಳ್ಳೆಯ ಆರೋಗ್ಯವು ಲಭಿಸುವುದೆಂಬುದು ಸಾಮಾನ್ಯ ವಚನವು. ಆದರೆ ಅದನ್ನು ಬಾರಿಬಾರಿಗೂ ಹೇಳಿಕೊಂಡಿರುವುದರಲ್ಲಿ ಪ್ರಯೋಜನವಿರುವುದಿಲ್ಲ. ನಾವು ಒಳ್ಳೆಯ ಕ್ರಮವಾದ ಜೀವನವನ್ನು ನಡೆಸಬೇಕು. ನಾವು ಎಷ್ಟು ಹೊತ್ತು ನ್ಯಾಯವಾಗಿ ನಿದ್ರೆಮಾಡಬೇಕೋ, ಅಷ್ಟು ಹೊತ್ತು ಮಾಡಬೇಕು. ಮನಸ್ಸಿಗೆ ಹಿಡಿದ ಕಾರ್ಯಗಳನ್ನೇ ಮಾಡಬೇಕು. ಸ್ತ್ರೀಭೋಗಗಳನ್ನು ಅಳತೆಗೆ ಮೀರಿ ಅನುಭವಿಸದಿರಬೇಕು. ನಮ್ಮ ಆಹಾರ ವಿಷಯದಲ್ಲಿ ಜಾಗ್ರತೆಯಾಗಿರಬೇಕು. ಒಳ್ಳೆಯ ಆಹಾರವನ್ನು ಸಂಗ್ರಹಿಸಿ ಭಜಿಸುತ್ತಲೂ, ಆಗಾಗ ಅವುಗಳನ್ನು ಮಾರ್ಪಡಿಸುತ್ತಲೂ ಬಂದರೆ, ಅದರಿಂದ ಲಾಭವುಂಟು. ಆದರೆ, ರುಚಿಕರವಾದ ಮತ್ತು ಬಲವಾದ ಆಹಾರವನ್ನು ಸೇವಿಸುವುದರಿಂದ ಮಾತ್ರ ಪ್ರಯೋಜನವಿಲ್ಲ. ತನಗೆ ಇಷ್ಟವಿಲ್ಲದ ಆಹಾರವನ್ನು ಬಿಟ್ಟುಬಿಡಬೇಕು. ಯಾವಾಗಲೂ ಅಳತೆಗೆ ಮೀರಿ ಭುಜಿಸುವುದಕ್ಕಿಂತ ಸ್ವಲ್ಪ ಕಡಿಮೆಯಾಗಿ ಭುಜಿಸುವುದೇ ಉತ್ತಮವು.

ಅನೇಕ ವರ್ಷಗಳಿಂದ ನಾನು ದಿನಕ್ಕೆ ಎರಡೇ ಎರಡುವೇಳೆ ಮಾತ್ರ ಊಟಮಾಡುತ್ತೇನೆ. ಹೊಗೆಸೊಪ್ಪನ್ನುಪಯೋಗಿಸುವವರು ಅದನ್ನುಪಯೋಗಿಸದವರಿಗಿಂತಲೂ ಕಡಿಮೆಯಾದ ಆಹಾರವನ್ನೇ ತೆಗೆದುಕೊಳ್ಳುವರೆಂದು ನನಗೆ ತೋರಿದೆ. ಆದರೆ, ಅದರ ಸೇವನೆಯು ಒಳ್ಳೆಯದೆಂದು ನಾನು ಎಂದಿಗೂ ಶಿಫಾರಸು ಮಾಡುವುದಿಲ್ಲ. ಅದೊಂದು ಕೆಟ್ಟ ಅಭ್ಯಾಸವೇ! ಅದನ್ನು ಎಲ್ಲರೂ ಬಿಟ್ಟುಬಿಡುವುದೇ ಮೇಲು! ಹೊಗೆ ಕುಡಿಯುವುದಕ್ಕಿಂತಲೂ ಹೊಗೆಸೊಪ್ಪನ್ನು ತಿನ್ನುವುದು ಅಷ್ಟು ಕೆಟ್ಟುದಲ್ಲ.

ದೇಹಾಭ್ಯಾಸಗಳನ್ನು ಕ್ರಮಪಡಿಸುವುದು ಆರೋಗ್ಯಕ್ಕೆ ಒಳ್ಳೇ ಪ್ರಯೋಜಕವಾಗಿರುವುದರೊಡನೆ ಮನಸ್ಸಿನ ಸ್ಥಿತಿಯನ್ನು ಕ್ರಮಪಡಿಸುವುದರಿಂದ, ಅಧಿಕ ಲಾಭವುಂಟೆಂಬುದು ಈಗ ಡಾಕ್ಟರುಗಳ ಅಭಿಪ್ರಾಯವು. ಅಸೂಯೆ, ವಿರೋಧ, ಕಾಮ, ಕೋಪ, ದುಃಖ, ಚಿಂತೆ, ಮನಸ್ಸಿನಲ್ಲಿ ಇವು ಐದು ವಿಧವಾದ ಕಳವಳಗಳು. ಅಧಿಕವಾಗಿ ಊಟ ಮಾಡುವುದು, ತಂಗಾಳಿಗೆ ದೇಹವನ್ನು ತೆರೆದಿಟ್ಟುಕೊಳ್ಳುವುದು, ಈ ಮುಂತಾದುವುಗಳು ಆರೋಗ್ಯಕ್ಕೆ ಹೆಚ್ಚು ಹಾನಿಕರ. ಈ ಕಾಲದ ಜನಬಾಹುಳ್ಯ, ಕಷ್ಟಜೀವನ ಇವುಗಳಿಗೆ ತಕ್ಕಂತೆ ಡಾಕ್ಟರುಗಳೂ ಹೊಸತರದ ಡಾಕ್ಟರುಗಳಾಗಿರಬೇಕು. ಎಂದರೆ, ಅವರು ಚಿಕಿತ್ಸಕರಾಗಿರುವುದಲ್ಲದೆ, ಪ್ರಕೃತಿಸಂಬಂಧವಾದ ವಿಷಯಗಳನ್ನೂ ಕಲಿತಿರಬೇಕು. ಆತ್ಮಲಕ್ಷಣ ವಿದ್ಯೆಯಲ್ಲಿ ನಿಪುಣನಾಗಿಯೂ, ತತ್ವಶಾಸ್ತ್ರಿಯಾಗಿಯೂ, ಗುರುವಾಗಿಯೂ ಇರಬೇಕು. ಇತರರಿಗೆ ಸಹಾಯಮಾಡುವುದು ಬಹು ಶ್ಲಾಘ್ಯವಾದುದು. "ಮನುಷ್ಯನು ತಾನೊಬ್ಬನೇ ತಿಂದು ಬಾಳುವುದಕ್ಕೆ ಮಾತ್ರ ಹುಟ್ಟಿದವನಲ್ಲ."

—ಆ. ಚೆ.

ಸಿಗಡೀ ಜ್ವರಕ್ಕೆ—೨ ಲವಂಗ ಮತ್ತು ೨ ಏಲಕ್ಕೀ ಕಾಳುಗಳನ್ನು ಜಜ್ಜಿ ಕಬ್ಬಿಣದ ಸೌಟಿನಿಂದ ಹುರಿದು, ನೀರು ಹಾಕಿ ಕುದಿಸಿ ಒಂದು ತೀರ್ಥ ಸೌಟಿನಷ್ಟು ಕುಡಿಯಲಿಕ್ಕೆ ಕೊಡಬೇಕು.

ಹಾಸ್ಯವನ್ನು ಅವಸರದಿಂದ ಓದುವುದಲ್ಲ. ಅದರಲ್ಲಿನ ಶಬ್ದಾರ್ಥದಲ್ಲಡಗಿರುವ ಹಾಸ್ಯರಸವನ್ನು ಹೀರಬೇಕು.

ಬಡವರ ಬಂಧು ಹಾಸ್ಯೌಷಧಾಲಯ.

ಹಾಸ್ಯಸಂಗ್ರಹಕಾರರು ಬೇಕಾ ಗಿದ್ದಾರೆ. ಉತ್ತಮ ಹಾಸ್ಯ ಗಳಿಗೆ "ಸುಸ್ವಾಗತ"ವಿದೆ.

ಡಾಕ್ಟರರು:

ವಿದ್ವಾನ್ ಪುಟ್ಟಂಭಟ್ಟರು, Indian Cooking Service.

ಅತೀ ಅಗ್ಗ! **ಮನೋರೋಗಕ್ಕೆ ಕೆಳಗಿನವು ದಿವ್ಯೌಷಧ.** **ನಗುವವರಿಗೆ ಧರ್ಮ**

ಉಪಾಧ್ಯಾಯ:— ಏನಯ್ಯ! ನಿಮ್ಮ ಮಗನೇಕೆ ಶಾಲೆಗೆ ಬರಲಿಲ್ಲ?

ವೆಂಕಟಯ್ಯ:— ಅವನಿಗೆ ಕಠಿಣ ಜ್ವರ ಬರುತ್ತಿದೆ.

ಉ;—ಏನು ಕಾರಣ?

ವೆಂಕ:—ಕಾರಣ ನೀವೇ!

ಉ:—ಹೇಗದು?

ವೆಂಕ:—ಒಂದು ಮಾವಿನ ಕಾಯನ್ನು ತಿನ್ನಲು ೩ ನಿಮಿಷ ತಗಲಿದರೆ ೨೦ ಮಾವಿನ ಕಾಯಿಗಳನ್ನು ತಿನ್ನಲು ಎಷ್ಟು ನಿಮಿಷಗಳು ತಗಲುವುವೆಂದು ಲೆಖ್ಖ ಕೊಟ್ಟಿರುವಿರಂತೆ. ಪಾಪ! ಆ ಹುಡುಗನು, ಮನೆಗೆ ಬಂದು ಮರದಿಂದ ೨೦ ಕಾಯಿಗಳನ್ನು ಕ್ಕೊಯ್ದು ಮನೆಯಲ್ಲಿದ್ದ ಗಡಿಯಾರವನ್ನು ನೋಡಿ ತಿನ್ನಲುಪಕ್ರಮಿಸಿದನು. ಹಾಗೆ ೨೦ ಕಾಯಿಗಳನ್ನು ತಿಂದರೆ ಹೊಟ್ಟೆ ನೋವಾಗದೆ ನಿಂತೀತೆ? ಚಿಕ್ಕ ಮಕ್ಕಳಿಗೆ ಇಂತಹ ಲೆಕ್ಕಗಳನ್ನು ಕೊಟ್ಟರೆ ಹೇಗೆ ಸ್ವಾಮಿ?

× × ×

ಡಾಕ್ಟರ್:—ಚೆನ್ನಾಗಿ ಕುಲುಕಿ ಔಷಧವನ್ನು ಗಂಟೆಗೆ ೨ ಸಲ ಕೊಡಿ; ಮತ್ತು ಸಂಜೆಗೆ ಬಂದು ರೋಗಿಯ ದೇಹ ಸ್ಥಿತಿಯನ್ನು ತಿಳಿಸಿ.

ಗಿರಾಕಿ:—(ಸಂಜೆಗೆ ವ್ಯಸನಾಕ್ರಾಂತನಾಗಿ) ರೋಗಿ ತೀರಿಹೋದನು ಎಂದನು.

ಡಾಕ್ಟರ್:—ಹ್ಯಾಗೆ? ಔಷಧವನ್ನು ಚೆನ್ನಾಗಿ ಕುಲುಕಿ ಕೊಡಲಿಲ್ಲವೊ?

ಗಿರಾಕಿ:—ರೋಗಿ ಬಹಳ ಸುಸ್ತಾಗಿದ್ದ. ಇಬ್ಬರು ಕಷ್ಟಪಟ್ಟು ಅವನ ರಟ್ಟೆಗಳನ್ನು ಹಿಡಿದು ಚೆನ್ನಾಗಿ ಕುಲುಕಿದೆವು. ನಂತರ ಔಷಧ ಕೊಡುವಷ್ಟರಲ್ಲಿ ಪ್ರಾಣ ಹೋಯಿತು.

× × ×

ಎರಡನೇ ಹೆಂಡತಿ:—ನೋಡಿದಿರಾ! ನಿಮ್ಮ ಮೊದಲನೇ ಹೆಂಡತಿಯ ಮಕ್ಕಳು ನನ್ನನ್ನು "ತಾಯಿ" ಎಂದು ಕರೆಯುವುದಿಲ್ಲ.

ಗಂಡ:—ಏನು? ಅವರು ನಿನ್ನನ್ನು ತಾಯಿ ಎಂದು ಕರೆಯುವುದಿಲ್ಲವೇ! ಅವರು ಬಿಡು! ಅವರ ಅಪ್ಪನಿಂದ ಹೇಳಿಸ್ಸೇನು.

× × ×

ರಾಧೆ:—ಏನಮ್ಮ ನೀವೆಷ್ಟು ಮಂದಿಗಳಿದ್ದೀರಿ?

ಜಾನಕಿ:—ನಾನು ಮತ್ತು ನನ್ನ ಗಂಡಂದಿರಿಬ್ಬರು.

ರಾಧೆ:—ಅಂದರೆ?

ಜಾನಕಿ:—ನನ್ನ ಗಂಡಂದಿರು ಮತ್ತು ನಾನು ಇಬ್ಬರೇ!

ಶೂದ್ರ:—ಏನು ಭಟ್ರೆ? ಕಾಫಿ ಬಹಳ ಸಪ್ಪೆ ಮಾಡಿ ಕೊಟ್ಟಿರಲ್ಲ?

ಭಟ್ರು:—ಏನೋ? ಅಷ್ಟು ಸಕ್ಕರೆ ಹಾಕಿ ಇನ್ನೂ ಸಪ್ಪೆಯಾಗಿದೆ ಎನ್ನುವಿಯಾ?

ಶೂದ್ರ:—ಇಕೊಳ್ಳಿ ಸ್ವಾಮಿ! ನೀವೇ ಇದನ್ನು ಕುಡಿದು ನೋಡಿರಿ. ಆಗ ನಿಮಗೇ ಗೊತ್ತಾಗುತ್ತದೆ.

× × ×

ಲಕ್ಷ್ಮಣನೂ ಬಾಲಕೃಷ್ಣನೂ ಜಗಳ ಮಾಡುತ್ತಿದ್ದಾಗ ನಾರಾಯಣನು ನೋಡಿ ಸಮೀಪಕ್ಕೆ ಬಂದು "ಯಾಕೋ ಜಗಳ ಮಾಡುತ್ತೀರಿ" ಎಂದನು.

ಲಕ್ಷ್ಮಣ:—ಬಾರದೆಯಾ? ಒಳ್ಳೆದೇ ಆಯಿತು. ನಿನಗೋಸ್ಕರ ನಾವು ಜಗಳವಾಡುತ್ತಿದ್ದುದು.

ನಾರಾಯಣ:—ಅದೇಕೆ?



ಲಕ್ಷ್ಮಣ:— ನಾನು ನಾರಾಯಣನ ಬುದ್ಧಿ ಕತ್ತೆಯಂತೆ ಎಂದೆ. ಬಾಲಕೃಷ್ಣನು ಅದಕ್ಕೊಪ್ಪದೆ ಅವನ ಬುದ್ಧಿ ನಾಯಿಯಂತೆ ಎಂದನು. ಅದಕ್ಕಾಗಿ ಜಗಳ, ಇದರಲ್ಲಿ ನಿಜ ಯಾರದು?

ನಾರಾಯಣ:—(ನೆಗಾಡಿ) ಇದಕ್ಕಾಗಿ ಇಷ್ಟು ತೊಂದರೆ ಏಕೆ? ಇತ್ತ ಬನ್ನಿ (ಎಂದು ಲಕ್ಷ್ಮಣನನ್ನೊಂದು ಕಡೆ, ಬಾಲಕೃಷ್ಣನನ್ನೊಂದು ಕಡೆ ನಿಲ್ಲಿಸಿ ತಾನು ಅವರ ಮಧ್ಯೆ ನಿಂತು) ನಾನೀಗ ಕತ್ತೆಯೂ ಅಲ್ಲ; ನಾಯಿಯೂ ಅಲ್ಲ; ಅವುಗಳೆರಡರ ಮಧ್ಯೆ ಎಂದನು.

× × ×

ಮಗ:—ಅಮ್ಮ ನನಗೆ ಮುಂದಕ್ಕೆ ಮದುವೆಯಾಗುವಾಗ ನಿನ್ನನ್ನು ಮಂಟಪದೊಳಗೆ ಕಾಲಿಡಲು ಬಿಡುವುದಿಲ್ಲ.

ತಾಯಿ:—ಅದೇಕೆ ಮಗು?

ಮಗ:—ನೀನು ನಿನ್ನ ಮದುವೆಗೆ ನನಗೆ ಹೇಳಿದ್ದೀಯಾ?

ಸಾಹುಕಾರ:—ಜಡ್ಜರೇ ನನ್ನ ವಸ್ತುಗಳನ್ನು ಕ
ವನು ಇವನೇ.

ಧೈರ್ಯವಂತ ಕಳ್ಳ:—ನೋಡಿ ಸ್ವಾಮಿ ಸುಳ
ಹೇಳುತ್ತಾನೆ. ನಾನು ಕದಿಯುವಾಗ ಇವನು ಮಲಗಿದ್ದ
ಆಭರಣಗಳು ಇವನದಲ್ಲ. ಇವನ ಹೆಂಡತಿದ್ದು. ತನ
ದೆನ್ನುತ್ತಾನೆ.

× × ×

ಉಪಾಧ್ಯಾಯರು:—ಕೃಷ್ಣ ನಿನಗೆಷ್ಟು ಪ್ರಾಯ?

ಶಿಷ್ಯ:—ನನಗೆ ಗೊತ್ತಿಲ್ಲ. ನಿಮಗೆ ಗೊತ್ತಿಲ್ಲವೋ

ಉ:—ನನಗೆ ಗೊತ್ತಿಲ್ಲ.

ಶಿಷ್ಯ:—ಹಾಗಾದರೆ ನಿಮಗೆ ತಿಳಿಯದಿರುವುದು ನನಗೆ ತಿಳಿಯುವುದು ಹೇಗೆ? ನೀವು ಗುರು, ನಾನು ಶಿಷ್ಯ.

× × ×

ಹೊಸ ಗಂಡನು ಒಂದು ಮೂಲೆಯಲ್ಲಿ ನಿಂತ
ಹೆಂಡತಿಯೊಡನೆ ನನಗೊಂದು —ತ್ತು ಕೊಡು ಎಂದು
ಅನೇಕ ಸಲ ಕೇಳಿದ. ಅವಳು ಕೊಡಲಿಲ್ಲ. ಸುಮ್ಮನೆ
ನಿಂತಿದ್ದಳು. ಕೊನೆಗೆ ಅವಳು "ನಿಮ್ಮ ತುಟಿಗೇನು
ಸಂಕಟವೇ?" ಎಂದುಬಿಟ್ಟಳು.

× × ×

ಮಿಠಾಯಿ ಅಂಗಡಿಗೆ ಹೋಗಿ ಒಬ್ಬ ಹುಡುಗನು, 'ಒಂದು ಸೇರು ಲಾಡು ಕೊಡಿ' ಎಂದನು. ಲಾಡು ಪೊಟ್ಲೆಗಳನ್ನು ಅಂಗಡಿಯವನು ಕಟ್ಟಿ ಕೊಡಲು, 'ಲಾಡು ಬೇಡ, ಜುಲೇಬಿ ಕೊಡಿ' ಎಂದನು. ಜುಲೇಬಿ ಪೊಟ್ಲೆ ಕಟ್ಟಿ ಕೊಟ್ಟೊಡನೆಯೇ ಹುಡುಗನು ಲಾಡನ್ನು ಹಿಂದೆ ಕೊಟ್ಟು, ಸರಾಸರಿ ಮನೆಯ ಕಡೆಗೆ ತೆರಳಿದನು. 'ಕಾಸು ಕೊಡದೆ ಜುಲೇಬಿಯನ್ನು ಕೊಂಡುಹೋಗುತ್ತಿಯೆ' ಎಂದು ಅಂಗಡಿಯವನು ಕೇಳಲು 'ಜುಲೇಬಿಗೆ ಬದಲು ಲಾಡು ಕೊಟ್ಟಿರುವೆನಲ್ಲಾ' ಎಂದನು. 'ಲಾಡಿನ ಕಾಸು ಎಲ್ಲಿ ಉಂಟು?' ಎಂದು ಅಂಗಡಿಯವನು ಪ್ರಶ್ನಿಸಲು, 'ನಾನು ಲಾಡುಗಳನ್ನು ಕೊಂಡುಕೊಳ್ಳಲೇ ಇಲ್ಲ'ವೆಂದು ಹುಡುಗನು ಉತ್ತರಿಸಿ ನಡೆದುಬಿಟ್ಟನು.

× × ×

ಒಬ್ಬ ಸಮಾಜಸುಧಾರಕಳು ಬೀದಿಯಲ್ಲಿ ಸಿಗರೇಟು ಎಳೆದುಕೊಂಡು ಹೋಗುವ ಹುಡುಗನನ್ನು ನೋಡಿ "ಏನೋ ಮಗೂ, ನೀನು ಹೀಗೆ ಸಿಗರೇಟು ಎಳೆಯುವುದು ನಿನ್ನಪ್ಪನಿಗೆ ಗೊತ್ತಿದೆಯೇ" ಎಂದಳು.

ಹುಡುಗ:—(ಸಿಟ್ಟಿನಿಂದ) "ಹೆಂಗಸಾದ ನೀನು ಗಂಡಸಾದ ನನ್ನೊಡನೆ ಬೀದಿಯಲ್ಲಿ ಮಾತನಾಡುವುದು ನಿನ್ನ ಗಂಡನಿಗೆ ತಿಳಿದಿದಿಯೇ" ಎಂದು ಹೋಗಿಬಿಟ್ಟನು.

ಎಳೆ ಮಕ್ಕಳಿಗೆ ವಾಂತಿಭೇದಿಯಾಗಿದ್ದರೆ— ತುಳಸೀ ಬೀಜ ಅರ್ಧ ತೊಲೆ, ಬಡೇ ಸೋಪು ಕಾಲು ತೊಲೆ, ಒಳ್ಳೆಮೆಣಸು ಎರಡು, ದಾಳಿಂಬದ ಓಡ್ಮು ಅರ್ಧ ತೊಲೆ ಇವುಗಳನ್ನು ಹುಡಿ ಮಾಡಿ ಹಾಲಿನಲ್ಲಿಯಾಗಲೀ, ನೀರಿನಲ್ಲಿಯಾಗಲೀ ಅರೆದು ಕೊಡಬೇಕು.

"ಮದುವೆ ಮಾಡಬೇಕು! ಹಣಕಾಸು ಮಿಗಬೇಕು!! ಮಾನ ಬರಬೇಕು!!!"

ಉಪಾಯವೇನು?

ಲೇಖಕರು:—ಡಾ। ಎಮ್. ಸಿದ್ದಲಿಂಗಯ್ಯನವರು, ಎಮ್. ಎ., ಪಿ. ಎಚ್. ಡಿ. ಪ್ರಿನ್ಸಿಪಾಲ್, ಟ್ರೈನಿಂಗ್ ಕಾಲೇಜ್, ಮೈಸೂರು.

ವಿವಾಹದ ವೆಚ್ಚದಿಂದಾಗಿ ಬಡತನಕ್ಕಿಳಿಯುವ ಸಮಾಜಗಳು ಬಹಳವಿವೆ. ಐಶ್ವರ್ಯವಂತರೂ ಬಡವರೂ ಈ ಕೆಳಗಿನ ಸಲಹೆಗಳನ್ನು ಆಚರಣೆಗೆ ತಂದರೆ ಉತ್ತಮ.

ಪ್ರತಿಯೊಂದು ಪಟ್ಟಣ ಮತ್ತು ಗ್ರಾಮವಾಸಿಗಳು ಅಗತ್ಯವಾಗಿ ಈ ಲೇಖನವನ್ನೋದಬೇಕಾಗಿ ವಿನಂತಿ

ಈಗ ಗೊದ್ದಗಿರುವ ಚೈತ್ರ, ವೈಶಾಖ, ಜೇಷ್ಠ ಮಾಸಗಳೆಂದರೆ ಲಗ್ನ ಮಾಸಗಳೆಂದೇ ಹೇಳಬಹುದು. "ಅಯ್ಯೋ, ಇನ್ನು ನಮಗೆ ವಯಸ್ಸಾಯಿತು. ಮಕ್ಕಳು ಮೊಮ್ಮಕ್ಕಳ ಲಗ್ನಗಳನ್ನು ಮಾಡಿ ಕಣ್ಣುತುಂಬ ನೋಡಿಬಿಡೋಣ"ವೆಂದು ಕೆಲವರು; "ಹೆಣ್ಣು ಮಕ್ಕಳಿಗೆ ಹತ್ತು ವರ್ಷವಾಯಿತು, ಹನ್ನೊಂದು ವರ್ಷವಾಯಿತು, ಇನ್ನೇನು ಗತಿ. ಇತರರು ಆಡಿಕೊಳ್ಳುವರಲ್ಲ! ಏನಾದರೂ ಮಾಡಿ, ಒಂದು ಹೆಣ್ಣಿಗೆ ಒಂದು ಗಂಡನ್ನು ಗಂಟು ಹಾಕಿ ಬಿಡೋಣ"ವೆಂದು ಮತ್ತೆ ಕೆಲವರು; "ನಮ್ಮ ಹುಡುಗರು ಹೈಸ್ಕೂಲ್ ಕಾಲೇಜುಗಳಲ್ಲಿ ಓದುತ್ತಾರೆ. ಈಗಲೇ ನಾನು ಮುಂದು ತಾನು ಮುಂದೆಂದು ಅವರಿಗೆ ಹೆಣ್ಣು ಕೊಡಲು ಅನೇಕರು ಮುಂದೆ ಬರುತ್ತಿದ್ದಾರೆ. ಹುಡುಗರು ಪರೀಕ್ಷೆಗೆ ಕಟ್ಟಿ "ಪ್ಯಾಸು" ಮಾಡುವ ವರೆಗೂ ಬಿಂಕವಾಗಿರೋಣವೆಂದು ಉದಾಸೀನ ಮಾಡಿದರೆ "ಫೇಲಾ"ಗಿ ಹೋಗಿಬಿಟ್ಟರೆ ಗತಿಯೇನು, ಅಥವಾ ಒಂದು ವೇಳೆ "ಪ್ಯಾಸಾ"ದರೂ ಸರ್ಕಾರಿ ನೌಕರಿ ದೊರಕದೆ ಒದ್ದಾಟವಾದರೆ ಏನು ಮಾಡೋಣ? ಆದ್ದರಿಂದ ಈಗಲೇ "ಶುಭಸ್ಯ ಶೀಘ್ರಂ" ಎಂದು ಮದುವೆ ಮಾಡಿ ಬಿಡೋಣ, ಬಂದ ಹೆಣ್ಣು ಕೈಬಿಡಬಾರದು" ಎಂದು ಬೇರೆ ಕೆಲವರು; "ಸಾವಿರ ಸುಳ್ಳು ಹೇಳಿ ಒಂದು ಕಲ್ಯಾಣ ಮಾಡು" ಎಂದು ಹಿರಿಯರು ಹೇಳುತ್ತಾರೆ. ಏನಾದರೂ ಆಗಲಿ, ಇವರಿವರಿಗೆ ಗಂಟು ಹಾಕಿ ಬಿಡೋಣ. ಮುಂದೆ ಇವರ ಹಣೆಯ ಬರೆಹವಿದ್ದಂತಾಗಲಿ" ಎಂದು ಇಲ್ಲದ ಸಲ್ಲದ ಬುದ್ಧಿಹೇಳಿ ದಾರಿ ಹಚ್ಚಿಸುವವರ ಮಾತು ಕೇಳಿ ಮದುವೆ ಮಾಡುವವರು ಇನ್ನು ಕೆಲವರು. ಹೀಗೆಲ್ಲಾ ನಾನಾ ಕಾರಣಗಳಿಂದ ಸಾವಿರಾರು ಲಗ್ನಗಳು ಏರ್ಪಾಡಾಗುತ್ತವೆ, ನಡೆದೂ ಹೋಗುತ್ತವೆ. ಇವನ್ನೆಲ್ಲಾ ನಿಲ್ಲಿಸಬೇಕೆಂಬ ಉದ್ದೇಶ ನನಗಿಲ್ಲ. ಹಾಗೆ ಉದ್ದೇಶ ಮಾಡಿದರೂ ಶೇಕಡ ಒಂದರಷ್ಟು ಸಾರ್ಥಕವಾಗುವ ಹಾಗೂ ಇಲ್ಲ, ನಮ್ಮ ಮನೋಪ್ರವೃತ್ತಿಮಾರ್ಗವೇ ಒಂದು ರೀತಿಯದು. ಸಂಪ್ರದಾಯ, ಪೂರ್ವಪದ್ಧತಿ ಇವುಗಳನ್ನು ಬಿಟ್ಟು ಬೇರೆ ಮಾತೇ ಇಲ್ಲ. ಒಂದೇ ವೇಳೆ ಥಟ್ಟನೆ ಬದಲಾಯಿಸೋಣವೆಂದು ಹೊರಡುವುದು ವಿವೇಕವೂ ಅಲ್ಲ, ಸಾಧುವೂ ಅಲ್ಲ. ಆದ್ದರಿಂದ ಈ ವಿಷಯ ಈಗ ಬೇಡ, ನೀವು ನಿಮ್ಮ ಮನೆಯಲ್ಲಿ ಮದುವೆ ಮಾಡಲು ಪ್ರಯತ್ನಗಳನ್ನು ಅಗತ್ಯ ಮಾಡಿರಿ. ಅದಕ್ಕೆ ಶ್ರೀ ಪರಮಾತ್ಮನು ಸರ್ವಮಂಗಳವನ್ನುಂಟುಮಾಡಲೆಂದೇ ನನ್ನ ಪ್ರಾರ್ಥನೆ. ಆದರೆ ಮದುವೆ ಮಾಡುವುದರಲ್ಲಿ ಕೆಲವು ವಿಚಾರಗಳನ್ನು ಮಾತ್ರ ತಮ್ಮ ತಿಳುವಳಿಕೆಗೆ ತರಬೇಕೆಂದು ನನ್ನ ಮನಸ್ಸು ತವಕಪಡುತ್ತಿರುವುದರಿಂದ ಈ ನಾಲ್ಕಾರು ಮಾತುಗಳನ್ನು ತಮ್ಮಲ್ಲಿ ಅರಿಕೆ ಮಾಡುತ್ತೇನೆ.

"ಓಹೋ! ನಮ್ಮ ಮಾನ! ನಮ್ಮ ಮರ್ಯಾದೆ! ನಮ್ಮ ಗೌರವ ಇವನ್ನೆಲ್ಲ ಉಳಿಸಿಕೊಳ್ಳಬೇಕಲ್ಲ! ಕೈಯಲ್ಲಿ ಹಣವಿಲ್ಲದೆ ಹೋದರೆ ಸಾಲವನ್ನಾದರೂ ಮಾಡಬೇಕು. ಏನು ಮಾಡೋದು! ಯತ್ನವಿಲ್ಲ. ಮದುವೆ ಒಂದಾಗಲಿ, ಅನಂತರ ಸಾಲಕ್ಕೆ ಬಡ್ಡಿ ನಾವು ತೀರಿಸೋಣ. ಮದುವೆಯಾದ ಗಂಡ ಹೆಂಡತಿ ಅಸಲು ಸಾಲ ತೀರಿಸಿಕೊಳ್ಳಲಿ! ಅಂತೂ ಹಸೋ, ಹೇಗೋ ನಡೆಯುತ್ತದೆ. ಅದೆಲ್ಲ ಈಗ ಯೋಚನೆ ಮಾಡಿ ಫಲವೇನಿಷ್ಟು! ಒಂದು ವೇಳೆ ನಾವು ಹಾಗೂ ಹೀಗೂ ಖರ್ಚು ಕಡಿಮೆಮಾಡಬೇಕೆಂದು ಯೋಚಿಸಿದರೂ ನಮ್ಮ ನೆಂಟರಿಷ್ಟರೂ, ಅವರೂ ಹಾಗಿರಲಿ, ನಮ್ಮ ಮನೆ ಯಜಮಾನಿ ಸುಮ್ಮನೆ ಇರುತ್ತಾಳೆಯೇ! ಅದೆಲ್ಲ ಆಗದ ಹೋಗದ ಮಾತು—ಸಾಧ್ಯವಿಲ್ಲ—ಪ್ರಯೋಜನವಿಲ್ಲ – ಆದ್ದರಿಂದ ಹುಂ; ಏನಾದರೂ ಆಗಲಿ ಆ ಸಾಹುಕಾರನ ಹತ್ತಿರಲೋ ಕೊ-ಆಪರೇಟಿವ್ ಸೊಸೈಟಿಯಲ್ಲೊ ಎಲ್ಲೊ ಏನಾದರೂ ಮಾಡಿ, ಏನಿಲ್ಲವೆಂದರೂ ಒಂದು ಸಾವಿರ ರೂಪಾಯಿಗಳಾದರೂ ಅಥವಾ ಐನೂರು ರೂಪಾಯಿಗಳಾದರೂ ಸಾಲ ತಂದು ನಮ್ಮ ಯೋಗ್ಯತೆಗೆ ಸರಿಯಾಗಿ (ಯೋಗ್ಯತೆ ಅಂದರೇನು ಅದನ್ನು ಉಳಿಸಿಕೊಳ್ಳುವ ಸರಿಯಾದ ಮಾರ್ಗವಾವುದು ಆ ಯೋಚನೆಯೇ ಇಲ್ಲ) ಖರ್ಚು ಮಾಡಲೇಬೇಕು. ಹೇಳೋರು ಏನಾದರೂ ಹೇಳಲಿ, ನಾವು ಮಾಡೋದು ಮಾಡಲೇ ಬೇಕು" ಎಂದು ಈ ರೀತಿ ದೃಢಸಂಕಲ್ಪ. "ಹಾಸಿಗೆಯಿದ್ದಷ್ಟು ಕಾಲು ಚಾಚು" "ಖರ್ಚು ಕಮ್ಮಿ ಮಾಡು" ಎಂದು ಉಪನ್ಯಾಸಗಳೂ ದೊಡ್ಡ ದೊಡ್ಡ ಸಂಘಗಳ ತೀರ್ಮಾನಗಳೂ ಆಗಿರಬಹುದು. ಆದರೇನು! ಬಾಯಲ್ಲಿ ಬೇಕಾದ ಹಾಗೆ ಹೇಳಬಹುದು. ಈ ರೀತಿ ಮಾಡಿತೋರಿಸುವವರು ಎಷ್ಟು ಜನ ಇದ್ದಾರಯ್ಯ ಬೆರಳು ಮಡಿಸಿ ತೋರಿಸಿ? ನೋಡೋಣ!" ಎಂದಂದುಕೊಂಡು ಲಗ್ನವನ್ನು ಬಹಳ ಮೆಹನತ್ತಿನಿಂದಲೂ ವಿಜೃಂಭಣೆಯಿಂದಲೂ ಮಾಡಬೇಕೆಂದೇ ಕಡೆಗೂ ಹೆತ್ತವರ ತೀರ್ಮಾನ.

ಈಗ ನಾವು ಯೋಚಿಸೋಣ! ಸ್ವಲ್ಪ ವಿವೇಕದಿಂದಲೂ ವಿಚಕ್ಷಣೆಯಿಂದಲೂ ಕಾರ್ಯವನ್ನು ನಡೆಯಿಸುವುದಾದರೆ ಎಷ್ಟೊಂದು ಖರ್ಚನ್ನು ಕಡಿಮೆಮಾಡಬಹುದು! ಮದುವೆ ಎಂದರೆ ಏಳೆಂಟು ದಿವಸಗಳ ಸಮಾರಂಭ! ಅಷ್ಟು ದಿವಸಗಳೂ, ಊಟ ಉಪಚಾರಗಳು! ಕೆಲವು ದಿನಗಳ ಹಿಂದೆ ಬೆಂಗಳೂರು ಮಲ್ಲೇಶ್ವರದ ಒಂದು ಮದುವೆ ಮನೆಯೊಳಗೆ ಬೂಂದಿ ಮಾಡಿಟ್ಟದ್ದು ತಿಂದವರಿಗೆಲ್ಲ ವಾಂತಿಭೇದಿಯಾಯಿತಲ್ಲ! ಆದರೂ ಚಿಂತೆಯಿಲ್ಲ, ಹೇಗಾದರೂ ಮಾಡಿಸಿರಲಿ; ಅಂತು ಅಂತಹ ತಿಂಡಿಯೇ ಆಗಬೇಕು. ಉಡುಗೊರೆ ಬಹುಮಾನಗಳ ವಿಚಾರವಾಗಿ ಕುಟುಂಬದ ಸ್ತ್ರೀ ಪುರುಷರಿಗೆಲ್ಲ ಒಳ್ಳೊಳ್ಳೇ ಧೋತ್ರಗಳು, ಕಲಾಪತ್, ಪಂಚೆಗಳು, ಶಲ್ಯಗಳು, ಅರಳೀಪೇಟೆ ಈಗೀಗ ಬನಾರೀಸ್ ಸೀರೆಗಳು, ಕಲಾಬತ್ ರವಕೆಗಳು ಇವೆಲ್ಲವನ್ನು ಕೊಡಬೇಕು. ಒಡವೆ ವಿಚಾರ ಸ್ವಲ್ಪ ನೋಡಿದರೆ ಚಿನ್ನದ ಡಾಬೇ ಆಗಬೇಕು. ಆ ಚಿನ್ನದ ಡಾಬನ್ನು ಮುಂದೆ ಆರಕ್ಕೆ ಮೂರಾಗಿ ಮಾರಿ ಅದಕ್ಕೋಸ್ಕರ ಮಾಡಿದ ಸಾಲವನ್ನು ಹೇಗೆ ಮಾಡಿಯೂ ತೀರಿಸುವುದಕ್ಕಾಗದಿದ್ದರೂ ಚಿಂತೆಯಿಲ್ಲ. ಅದನ್ನು ಮಾಡಲೇಬೇಕು. ಸಂಗೀತ, ತಾಫ ಇವುಗಳಿಗೆ ದೊಡ್ಡದೊಡ್ಡ ಪಟ್ಟಣಗಳವರೇ ಆಗಬೇಕು. ಅಥವಾ ಆಯಾಯ ಸ್ಥಳದವರೇ ಆದರೂ ಅವರಿಗೆ ಉತ್ತೇಜನವನ್ನು ಕೊಡಬೇಕು. ಅದಕ್ಕೋಸ್ಕರ ನೂರಾರು ರೂಪಾಯಿಗಳು ಖರ್ಚಾಗಲೇ ಬೇಕು. ಓಲಗ, ಮೇಳ, ವಾದ್ಯ ಇವುಗಳಿಗೆ ತಂಜಾವೂರಿನವರೇ ಆಗಬೇಕು. ಲಗ್ನವಾದ ಮೇಲೆ ಮೆರವಣಿಗೆ! ಗಂಡಿನವರ ಹೆಣ್ಣಿನವರ ಮನೆ ಎರಡು ಕಡೆಗಳಲ್ಲೂ ಆಗಲೇ ಬೇಕು. ಅದಕ್ಕೆ ಮೋಟಾರುಕಾರೇ ಆಗಬೇಕು. ವಧೂವರರಿಗೆ ಪೂರ್ತಿಯಾಗಿ ಕಲಾಬತ್ತು ಡ್ರೆಸ್ಸೇ ಆಗಬೇಕು. ಹೀಗೆಲ್ಲ ನಾನಾ ಬಗೆಯ ಖರ್ಚುಗಳಿವೆ. ಹೀಗೆ ನಮ್ಮವರ ಮದುವೆ!

ಮುಖ್ಯವಾಗಿ ಈಗ ಅನ್ನದ ಖರ್ಚು ಬಟ್ಟೆಯ ಖರ್ಚು! ಇವುಗಳ ವಿಚಾರದಲ್ಲಿ

ಬೇಸಿಗೆಯಲ್ಲಿ ಮಕ್ಕಳ ಮೈಮೇಲೆ ಬೊಕ್ಕೆಗಳು, ಕುರುಗಳು ಎದ್ದರೆ— (೧) ನೇರಳೆ ಹಣ್ಣಿನ ಬೀಜವನ್ನು ನೀರಲ್ಲಿ ತೇದಿ ಮೈಗೆ ಹಚ್ಚಬೇಕು. (೨) ರಕ್ತಚಂದನ, ಗೋಪಿಚಂದನ, ಶ್ವೇತಚಂದನ ಇವುಗಳನ್ನು ನೀರಲ್ಲಿ ತೇದಿ ಮೈಗೆ ಹಚ್ಚಬೇಕು.

ನನಗೆ ತಿಳಿದ ಒಂದೆರಡು ಮಾತುಗಳನ್ನು ಇಲ್ಲಿ ಅತ್ಯಂತ ವಿನಯದಿಂದ ಅರಿಕೆ ಮಾಡುತ್ತೇನೆ. ನೀವು ಅವುಗಳಂತೆ ದಯವಿಟ್ಟು ನಡೆಯುವುದಾದರೆ ಪ್ರಜಾಸೇವೆ, ದೇಶಸೇವೆ, ತನ್ಮೂಲಕ ಈಶಸೇವೆಯನ್ನು ಮಾಡಿದಂತಾಗುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಆದುದರಿಂದ ನೀವು ದಯವಿಟ್ಟು ಈ ಕೆಳಗೆ ತಿಳಿಸುವ ವಿಷಯಗಳಿಗೆ ಸ್ವಲ್ಪ ಗಮನ ಕೊಡಬೇಕಾಗಿ ಬೇಡುತ್ತೇನೆ.

ಖರ್ಚನ್ನು ಆದಷ್ಟು ಕಡಿಮೆ ಮಾಡಿರಿ. ಲಗ್ನವನ್ನು ಏಳೆಂಟು ದಿವಸಗಳಿಗೆ ಬದಲಾಗಿ, ಒಂದೇ ದಿವಸ ಇಟ್ಟುಕೊಳ್ಳಬೇಕೆಂದು ದೃಢಸಂಕಲ್ಪ ಮಾಡಿರಿ. ಅದರಂತೆ ಆಚರಣೆಗೆ ತೆಗೆದುಕೊಂಡು ಬನ್ನಿ. ವಿವಾಹದ ಶುಭಕಾರ್ಯಗಳಲ್ಲಿ ಅನ್ನದಾನ ಮಾಡಬೇಕೆಂದು ಹೇಳುವಿರಲ್ಲವೇ? ಅಲ್ಲದೆ "ಅನ್ನದಾನದ ಸಮಾನ ಬೇರೆ ದಾನವಿಲ್ಲ. ಅದೇ ಶ್ರೇಷ್ಠ—ಅದೇ ಮುಕ್ತಿಗೆ ಮುಖ್ಯ ಮಾರ್ಗ,—ಆದ್ದರಿಂದ ಏನಾದರೂ ಆಗಲಿ, ಅನ್ನದಾನದ ವಿಚಾರದಲ್ಲಿ ಹಿಂತೆಗೆಯಬಾರದು" ಎಂದು ಹೇಳುವಿರಲ್ಲವೇ? ಹೌದು. ಅನ್ನದಾನವು ಶ್ರೇಷ್ಠವೇ ಸರಿ. ಆದರೆ ಈ ತರದ ಅನ್ನದಾನದ ಅಭಿಪ್ರಾಯವನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿರಿ. ನಿಮ್ಮ ನೆರೆಹೊರೆಯವರು, ಬಂದು ಸೇರುವ ನೆಂಟರಿಷ್ಟರು, ಇವರುಗಳನ್ನು ನಿಮ್ಮ ಯಥಾಶಕ್ತಿ ಭೋಜನೋಪಚಾರಗಳಿಂದ ಒಂದು ದಿವಸ ತೃಪ್ತಿಪಡಿಸಿರಿ. ಆದರೆ ಎಲ್ಲಾ ಕೆಲಸಗಳನ್ನೂ ಬಿಟ್ಟು ಏಳೆಂಟು ದಿವಸಗಳವರೆಗೆ ಎಲ್ಲರೂ ನಿಮ್ಮಲ್ಲಿರಬೇಕಾದ ಅಗತ್ಯವಿಲ್ಲ. ಪೂರ್ವಕಾಲವೆಂದರೆ ಆಗಿನ ಕಾಲಸ್ಥಿತಿ, ಸನ್ನಿವೇಶಗಳೇ ಬೇರೆ. ಕಾಲಕ್ಕನುಗುಣವಾಗಿ ಬದಲಾವಣೆಗಳನ್ನು ಮಾಡುವುದು ಯುಕ್ತವೂ ವಿವೇಕವೂ ಅಲ್ಲದೆ ಆವಶ್ಯಕವೆಂಬುದನ್ನು ತಿಳಿಯಿರಿ. ಹೀಗೆ ಏಳೆಂಟು ದಿನಗಳ ಬದಲಾಗಿ ಒಂದೇ ದಿವಸ ಮಾತ್ರ ಅನ್ನದಾನವನ್ನಿಟ್ಟುಕೊಂಡರೆ ಎಷ್ಟೋ ಹಣವನ್ನುಳಿಸಿಕೊಳ್ಳಬಹುದಲ್ಲವೇ? ಈ ರೀತಿ ಎಷ್ಟು ಉಳಿಸಿಕೊಳ್ಳಬಹುದೋ ಅಷ್ಟನ್ನೂ ಸರಿಯಾಗಿ ಲೆಕ್ಕಮಾಡಿ, ಹಿಂದುಮುಂದು ನೋಡಿ, ದೃಢಸಂಕಲ್ಪಮಾಡಿ ಆ ಹಣವೆಲ್ಲವನ್ನೂ ನಿಮ್ಮ ಸಮಾಜದ ಏಳಿಗೆಗಾಗಿ ಏರ್ಪಡಿಸಲ್ಪಟ್ಟಿರುವ ವಿದ್ಯಾಸಂಸ್ಥೆಗಳು, ಹಾಸ್ಟಲುಗಳು, ಫಂಡುಗಳು ಇಂತಹವುಗಳಿಗೆ ಸಮರ್ಪಣೆ ಮಾಡಿರಿ. ಆದರೆ ಈ ವಿಷಯದಲ್ಲಿ ಮತ್ತೊಂದು ಮಾತು. ಹಣವನ್ನೇನೋ ಉಳಿಸುವ ಮಾರ್ಗವನ್ನು ಒಪ್ಪಿ ಅನುಸರಿಸಿದರೂ, ಅದನ್ನು ಬೇರೆ ರೀತಿಯಲ್ಲಿ ವಿನಿಯೋಗಿಸುವ ಸೂಚನೆಯನ್ನು ಅಂಗೀಕಾರಮಾಡುವುದು ಬಹಳ ಕಷ್ಟ. ತಮಗೆ ತಿಳಿದ ರೀತಿಯಲ್ಲಿ ಅನ್ಯಾಕ್ರಾಂತವಾಗಿಯಾದರೂ ಖರ್ಚುಮಾಡಬಹುದು. ಆದರೆ ಆ ಮಾರ್ಗ ಬಿಟ್ಟು ಬೇರೆ ಮಾರ್ಗದಲ್ಲಿ ಖರ್ಚು ಮಾಡೆಂದರೆ ಒಪ್ಪುವುದು ಅತಿ ದುರ್ಲಭ. ಆದರೆ ಈ ಸಂದರ್ಭದಲ್ಲಿ ಅದು ಕಷ್ಟವಾಗಲಾರದು. ಹೀಗೆ ಅನ್ನ ಹಾಕುವುದು ಕಡಿಮೆ ಮಾಡಿದ್ದಲ್ಲಿ ಎಂತಹ ಕೃಪಣರೆಂಬ ಆಕ್ಷೇಪಣೆಗೆ ಎಲ್ಲಿ ಸಿಕ್ಕುವೆವೊ ಎಂಬ ಭೀತಿಯುಗೊಳಗಾಗಬೇಡಿ. ತನ್ನಿಮಿತ್ತ ಆ ರೀತಿ ಖರ್ಚು ಮಾಡುವ ಬದಲು ಶಾಶ್ವತ ಫಲ ದೊರೆಯುವ ಉತ್ತಮ ಮಾರ್ಗದಲ್ಲಿ ಖರ್ಚುಮಾಡಿದ ಪಕ್ಷದಲ್ಲಿ ಕೆಲವರು ಆಕ್ಷೇಪಿಸುವುದಾದರೂ ತಾವು ಜನಗಳಿಗೆ ಉತ್ತಮತರದ ಮೇಲ್ಪಂಙ್ತಿಯನ್ನು ಹಾಕಿಕೊಟ್ಟಂತಾಗುತ್ತದೆಂಬುದನ್ನು ಅರಿತು ತುಂಬಾ ಸಂತೋಷಚಿತ್ತರಾಗಿರಬಹುದು. ಊಟಉಪಚಾರಗಳ ವಿಚಾರದಲ್ಲಿ ಮತ್ತೊಂದು ಮಾತು. ಯಾರನ್ನೇ ಆಗಲಿ ಬಲವಂತ ಮಾಡಿ ಅನಾರೋಗ್ಯ ಮಾಡಬೇಡಿರಿ. ಕೇಳಿದಷ್ಟು ನೀಡುವ ಪದ್ಧತಿಯನ್ನು ರೂಢಿಗೆ ತನ್ನಿರಿ. ಊಟಕ್ಕೆ ಬಂದವರ ಆರೋಗ್ಯರಕ್ಷಣೆಗೆ ನೀವು ಲಕ್ಷ್ಯ ಕೊಟ್ಟರೆ ಅದರಿಂದ ಅವರ ಮನಸ್ಸು ಸಂತೋಷಪಟ್ಟರೆ, ಅದು ಮುಖ್ಯವೇ ಹೊರತು, ಬಲವಂತಕ್ಕೆ ಹೆಚ್ಚಾಗಿ ಭೋಜನಮಾಡಿದ ಕಾಲಕ್ಕೆ ಸರಿಯಾಗಿ ಅನ್ನಾಹಾರ ನಿದ್ರೆಗಳಿಲ್ಲದೆ ಅನಾರೋಗ್ಯದಿಂದ ವ್ಯಥೆಪಟ್ಟರೆ, ಆದರಿಂದ ಯಾರಿಗೂ ಶ್ರೇಯಸ್ಕರವಲ್ಲವೆಂಬುದನ್ನು ತಿಳಿಯಿರಿ. ಆದರೆ ನಾಚಿಗೆಪಡತಕ್ಕವರಿಗೆ ಹೊಟ್ಟೆ ತುಂಬಾ ನೀಡಲು ಸಾಧ್ಯವಿಲ್ಲವಾಗುತ್ತದೆಂದು ಹೇಳಬಹುದು. ಬಲವಂತ ಪದ್ಧತಿ ಇಲ್ಲವೆಂಬುದು ಎಲ್ಲರಿಗೂ ಗೊತ್ತಾದರೆ ಆಗ ಯಾರೂ ನಾಚಿಕೆಪಟ್ಟುಕೊಳ್ಳಲು ಅವಕಾಶವಿಲ್ಲವೆಂಬುದನ್ನು ನಾವುತಿಳಿಯಬೇಕು.

ಇನ್ನು ಬಟ್ಟೆಬರೆ ಖರ್ಚಿನ ವಿಚಾರ ನೋಡೋಣ. ಮದುವೆಯ ಕಾಲದಲ್ಲಿ ನಿಮಗೆ ಬೇಕು ಬೇಕಾದ ಬಟ್ಟೆಬರೆಗಳನ್ನು ಕೊಳ್ಳದೆ ಅವರಿಗೊಂದು ಧೋತ್ರ, ಇವರಿಗೊಂದು ಶಲ್ಯ, ಅವಳಿಗೊಂದು ಸೀರೆ, ಇವಳಿಗೊಂದು ರವಕೆ ಈ ರೀತಿ ಕೊಡುವುದರಿಂದ ಯಾವ ಫಲವುಂಟೋ ನಾವು ಬೇರೆ ಕಾಣೆವು. ಅಂತು ಇದು ದೊಡ್ಡ ಪದ್ಧತಿ. ಇನ್ನು ಮೇಲೆ ಲಗ್ನಪತ್ರಿಕೆಯಲ್ಲಿ 'ದಯೆಯಿಟ್ಟು ಯಾರೂ ಬಹುಮಾನ ತರಕೂಡದು' ಎಂದು ಅಚ್ಚು ಹಾಕಿಸಿರಿ. ಹಾಗೂ ಒಂದು ವೇಳೆ ಕಾರಣಾಂತರದಿಂದ ಒಂದೆರಡು ಮುಯ್ಯಿ ತೆಗೆದುಕೊಳ್ಳಬೇಕಾದ ಸಂದರ್ಭ ಬಂದಲ್ಲಿ ಬರೇ ರೂಪಾಯಿಗಳನ್ನೇ ತೆಗೆದುಕೊಳ್ಳುವ ಪದ್ಧತಿಗಳನ್ನು ಮೆಟ್ಟಲಾಗಿ ಆಚರಣೆಗೆ ತನ್ನಿರಿ. ಹಾಗೆಯೇ ನೀವು ಮರ್ಯಾದೆ ಮಾಡಬೇಕಾದರೂ ಅದೇ ರೀತಿಯಲ್ಲೇ ರೂಪಾಯಿಗಳನ್ನೇ ಕೊಡಿರಿ. ಹೀಗೆ ಮಾಡುವುದರಿಂದ ಆ ಹಣವನ್ನು ಅವರವರಿಗೆ ಯುಕ್ತತೋರಿದ ರೀತಿಯಲ್ಲಿ ಉಪಯೋಗಿಸಲು ಅವಕಾಶ ಉಂಟಾಗುತ್ತದೆ. ರವಕೆ, ಶಲ್ಯ ಇವುಗಳಿಗೆ ವೃಥಾ ಖರ್ಚುಮಾಡಿ ಅವರವರ ಅಭಿರುಚಿಗಳಿಗೆ ಸಲ್ಲದ ಬಟ್ಟೆಬರೆಗಳನ್ನು ಬಹುಮಾನ ಕೊಡುವ ಪದ್ಧತಿಯನ್ನು ಖಂಡಿತ ದಯವಿಟ್ಟು ನಿಲ್ಲಿಸಿರಿ.

ಈ ಎರಡು ವಿಷಯಗಳಲ್ಲೂ ಸೂಚಿಸಿದ ರೀತಿಯಲ್ಲಿ ಬದಲಾವಣೆಗಳನ್ನು ಮಾಡುವುದಾದರೆ ಅದರಿಂದ ನಮಗೆ ಎಷ್ಟು ಅನುಕೂಲವೆಂಬುದನ್ನು ನೀವೇ ಯೋಚನೆ ಮಾಡಿ ನೋಡಿರಿ. ಕನಿಷ್ಟಪಕ್ಷ ಶೇಕಡಾ ೮೦ರಷ್ಟು ಖರ್ಚನ್ನು ಕಡಿಮೆಮಾಡಬಹುದೆಂದು ನಾವು ಧಾರಾಳವಾಗಿ ಹೇಳಬಹುದು. ಇದರ ಜೊತೆಗೆ ತಾಫಾ (ನರ್ತನ) ವಗೈರೆ ಅನುಪಯುಕ್ತ ಖರ್ಚುಗಳನ್ನೂ ನಿಲ್ಲಿಸಿದಲ್ಲಿ ೧೦೦ ರೂಪಾಯಿ ಖರ್ಚಾಗಬೇಕಾದ ಕಡೆ ೨೦ ರೂಪಾಯಿಯಲ್ಲೂ, ೧೦೦೦ ರೂಪಾಯಿ ಆಗಬೇಕಾದ ಕಡೆ ೨೦೦ ರೂಪಾಯಿಯಲ್ಲೂ ಕಾರ್ಯವನ್ನು ಬಹಳ ತೃಪ್ತಿಕರವಾಗಿಯೇ ನೆರವೇರಿಸಬಹುದು.

"ಆದರೆ ಹೇಳುವುದೆಲ್ಲಾ ವೇದಾಂತವೇ ಸರಿ. ಈ ರೀತಿ ಯಾರೂ ಮಾಡದ್ದನ್ನು ನಾವು ಮಾಡಿ ನಮಗೇಕೆ ಕೆಟ್ಟ ಹೆಸರು? ನಮ್ಮ ಬಂಧುವರ್ಗದವರಲ್ಲಿ ಆಕ್ಷೇಪಣೆ ಎಂದು" ನೀವು ಹಿಂಜರಿಯಬಹುದು. ಅದಕ್ಕೆ ನಾವು ಹೇಳುವುದೇನೆಂದರೆ ನಿಮ್ಮ ನಿಮ್ಮ ಗ್ರಾಮಗಳಲ್ಲಿ ನಿಮ್ಮ ನಿಮ್ಮ ಪಂಗಡಗಳ ಮುಖಂಡರು ಎಲ್ಲರೂ ಸೇರಿ ಒಂದು ಹೊಸ ಕಟ್ಟಳೆಯನ್ನು ಮಾಡಬೇಕು. ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲದಲ್ಲಿ ಈ ತರದ ಕಟ್ಟಳೆಯು ಜ್ಯಾರಿಯಲ್ಲಿದ್ದುದನ್ನು ನೋಡಿ ತುಂಬಾ ಸಂತೋಷಪಟ್ಟೆನು. ಆ ಕಟ್ಟಳೆ ಏನೆನ್ನುವಿರೋ? 'ಮದುವೆಗೆ ಇಷ್ಟ ಬಂದವರನ್ನು ಕರೆಯಿರಿ. ಇದಕ್ಕೆ ಯಾರ ಆಕ್ಷೇಪಣೆಯೂ ಇಲ್ಲ. ಊಟ ಉಪಚಾರ ವಿಷಯಗಳು ಆದಷ್ಟು ಕಡಿಮೆ ಖರ್ಚಿನಲ್ಲಿ ಏರ್ಪಾಡು ಮಾಡಿ ಅದು ಎಲ್ಲರಿಗೂ ಸಂತೋಷಪಡಿಸಿದರೆ ನೀವು ಖರ್ಚು ಕಡಿಮೆ ಮಾಡುವುದರಿಂದ ಉಳಿಯುವ ಹಣವೆಲ್ಲವನ್ನೂ ನಮ್ಮ ಸಮಾಜಕ್ಕೆ ಅಥವಾ ಸಂಘಕ್ಕೆ ಕೊಡಿರಿ' ಎಂಬುದೇ. ಅಂದರೆ ಈ ದಿವಸ ನೂರಾರು ರೂಪಾಯಿಗಳು ಖರ್ಚು ಮಾಡಿ ಕ್ಷಣಿಕವಾದ ಆನಂದಪಟ್ಟು ನಾಳೆ ನೋಡಿದರೆ ಅದರಿಂದ ಯಾರಿಗೂ ಯಾವ ರೀತಿಯಲ್ಲೂ ಶಾಶ್ವತ ಪರಿಣಾಮವಾಗುವುದಿಲ್ಲ. ಅದಕ್ಕೆ ಬದಲು ನೂರು ರೂಪಾಯಿಗಳನ್ನು ಸಮಾಜದ ಸಂಸ್ಥೆಗಳಿಗೆ ಕೊಡುವುದರ ಮೂಲಕ ಸಮಾಜೋದ್ಧಾರಣ ಕಾರ್ಯವನ್ನು ಕೈಕೊಂಡಂತಾಗಿ ಅದರಿಂದ ಸರ್ವರಿಗೂ ಶಾಶ್ವತ ಕೀರ್ತಿಯುಂಟಾಗಿ ಪ್ರತಿಯೊಂದು ಸಮಾಜವೂ ಮತ್ತಷ್ಟು ಉನ್ನತ ಸ್ಥಿತಿಗೆ ಬರುವುದರಲ್ಲಿ ಸಂದೇಹವೇ ಇಲ್ಲ.

ಆದುದರಿಂದ ಈಗ ನೀವೆಲ್ಲರೂ ಈ ವರ್ಷದ ಲಾಗಾಯಿತು ನಿಮ್ಮ ನಿಮ್ಮ ಗ್ರಾಮಗಳಲ್ಲಿ ಅಂತಹ ಕಟ್ಟಳೆಗಳನ್ನು ಕೂಡಲೇ ಜ್ಯಾರಿಗೆ ತೆಗೆದುಕೊಂಡು ಬನ್ನಿ. ಈಗಾಗಲೇ ಪ್ರತಿಯೊಂದು ಸಮಾಜದ, ವ ಜಾತಿಯವರಲ್ಲಿ ಅನೇಕ ದೊಡ್ಡ ದೊಡ್ಡ ಸಂಘಗಳೂ, ಸಂಸ್ಥೆಗಳೂ ಇವೆ. ಅನಾಥಾಲಯಗಳೂ, ಹಾಸ್ಟಲುಗಳೂ, ಫಂಡುಗಳೂ ಅನೇಕ ಸ್ಥಳಗಳಲ್ಲಿವೆ. ಇಂತಹ ಸಂಸ್ಥೆಗಳಿಗೆ ಹೆಚ್ಚು ಹಣವು ಅತ್ಯಾವಶ್ಯಕವಾಗಿ ಬೇಕಾಗಿರುತ್ತದೆ. ಹಣವು ಹೆಚ್ಚಾಗಿ ಒದಗಿದಷ್ಟೂ ಆಯಾಯ ಸಮಾಜದವರಿಗೆ ಹೆಚ್ಚಿನ ಪ್ರಯೋಜನಗಳುಂಟು. ಆದಕಾರಣ ನೀವು ಮದುವೆಗಾಗಿ ಎಷ್ಟು ಖರ್ಚುಮಾಡಬೇಕೆಂದಿರುವಿರೋ, ಅಷ್ಟು ಹಣವನ್ನೂ (ಸಾಲವಿಲ್ಲದೆ ಒದಗಿಸುವ ಶಕ್ತಿಯನ್ನು ದೇವರು ನಿಮಗೆ ಕೊಟ್ಟದ್ದರೆ) ಅದರಲ್ಲಿ ಶೇಕಡಾ ೨೦ ಭಾಗ ಖರ್ಚು ಮಾಡಿ ಉಳಿದ ೮೦ ಭಾಗವನ್ನು ಇಂತಹ ಸಂಸ್ಥೆಗಳಿಗೆ ಅರ್ಪಿಸಿರಿ. ಹಾಗೆ ಹಣವನ್ನು ಒದಗಿಸುವ ಶಕ್ತಿ ಇಲ್ಲದಿದ್ದರೆ ಕೈಯಲ್ಲಿ ಎಷ್ಟು ಹಣವಿರುತ್ತದೆಯೋ, ಅದರಲ್ಲೂ ಆದಷ್ಟು ಹಣವನ್ನು ಉಳಿಸಿಕೊಂಡು ಕಾರ್ಯವನ್ನು ನೆರವೇರಿಸಿರಿ. ಹಾಗೆ ಮಾಡಿದ ಪಕ್ಷದಲ್ಲಿ ನಿಮ್ಮ ಬಂಧುವರ್ಗದವರು ನಿಮ್ಮ ಈ ವಿಧವಾದ ಮಾರ್ಪಾಟುಗಳಿಗೆ ಅತ್ಯಂತ ಸಂತೋಷಪಟ್ಟು ತಮ್ಮ ಸಹಾನುಭೂತಿಯನ್ನು ಮತ್ತಷ್ಟು ಹೆಚ್ಚಾಗಿ ಪ್ರಕಾಶಗೊಳಿಸುವುದರಲ್ಲಿ ಸಂದೇಹವಿಲ್ಲ. ಅಲ್ಲದೆ ಇದರಿಂದ ಜಗದೀಶನೂ ತೃಪ್ತನಾಗಿ ನಿಮಗೂ, ನೂತನ ವಧೂವರರಿಗೂ ದೀರ್ಘಾಯುರಾರೋಗ್ಯಾದಿ ಸರ್ವ ಸಂಪತ್ತುಗಳನ್ನೂ ಅತಿಶಯವಾಗಿ ದಯಪಾಲಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಅಂತೂ ಮುಖ್ಯವಾಗಿ ಬಾಯಿ ವೇದಾಂತ ಸಾಲದು. ಆಚರಣೆಯು ಅತ್ಯಾವಶ್ಯಕ.

ವಿವಿಧ ವಿಷಯ.

ಗಾಂಧೀ ಭಕ್ತೆ.

ಅಮೇರಿಕದ ಪ್ರಸಿದ್ಧ ಕವಿ ಜಾರ್ಜ್ ಕ್ರಾಂಕುಕ್ ಎಂಬವರ ೨೧ ವರ್ಷ ಪ್ರಾಯದ ಕುಕ್ ಎಂಬ ಯುವತಿಯು ಗಾಂಧಿಜೀಯವರ ಭಕ್ತೆಯಾಗಿರುವಳು. ಇವಳು ಗ್ರೀಸ್ ದೇಶದಿಂದ ಮುಂಬಾಯಿಗೆ ಹೋಗಿ, ಅಲ್ಲಿಂದ ಮೌಂಟ್ ಆಬುಗೆ ಹೋಗಿ ಅಲ್ಲಿ ಪಾವನ ಜೀವನವನ್ನು ನಡೆಸುತ್ತಾ ಗಾಂಧಿಜೀಯವರ ಬಿಡುಗಡೆಯನ್ನು ನಿರೀಕ್ಷಿಸುತ್ತಿದ್ದಾಳೆ. ಇವಳನ್ನು ಹಿಂದೀಯರು ನೀಲ ನಾಗವೇಣಿದೇವಿ ಎಂದು ಕರೆಯುತ್ತಿರುವರು. ಬಹು ಐಶ್ವರ್ಯವಂತ ಕುಟುಂಬಕ್ಕೆ ಸೇರಿದವಳಾಗಿದ್ದರೂ ಅವಳು ಖಾದಿ ಬಟ್ಟೆಯನ್ನೇ ಧರಿಸುತ್ತಿದ್ದಾಳೆ. ಇವಳು ಮಹಾತ್ಮಾಗಾಂಧಿಯವರ ಧರ್ಮಬೋಧೆಯನ್ನು ಚಿಕ್ಕಂದಿನಿಂದಲೂ ಮನಮುಟ್ಟಿ ಪಠಿಸುತ್ತಿದ್ದಳು. ತನ್ನ ೧೫ನೇ ವರ್ಷ ಪ್ರಾಯದಲ್ಲೇ ಮಹಾತ್ಮಾಜೀಯವರ ಚರಣಗಳನ್ನು ಧ್ಯಾನಿಸುತ್ತಿದ್ದಳು. ಇವಳು ಗಾಂಧಿಜೀಯವರ ಕುರಿತು ಹೇಳುತ್ತಾ "ಮಹಾತ್ಮಾಜೀಯವರ ಸದ್ಬೋಧನೆಗಳನ್ನು ತಿಳಿಯಲು ನಾನು ಅನೇಕ ವರ್ಷಗಳಿಂದಲೂ ಸಂಸ್ಕೃತವನ್ನು ಅಭ್ಯಸಿಸುತ್ತಿರುವೆನು. ಗಾಂಧಿಜೀಯವರು ಜಗದ್ವಂದ್ಯರು. ಸತ್ಯ, ಶಾಂತಿ, ಮತ್ತು ಪ್ರೇಮಗಳನ್ನು ಬೋಧಿಸಲು ಲೋಕಕ್ಕಿಳಿದಿರುವ ವಿಭೂತಿ ಮೂರ್ತಿಯು" ಎಂದಳು. ಅಮೇರಿಕದಲ್ಲೂ ಗ್ರೀಸ್ ದೇಶದಲ್ಲೂ ಇವಳು ಚರಕದ ಮಹಿಮೆಯನ್ನು ಬೋಧಿಸಿರುವಳು.

ಮುದುಕನಿಗೂ ಹೆಣ್ಣು ಬೇಕು!

ಕೊನ್‌ಸ್ಟೆಂಟಿನೋಪಲ್‌ನಲ್ಲಿ ಆಗಾ ಎಂಬ ೧೫೭ ವರ್ಷ ಪ್ರಾಯದ ಒಬ್ಬ ಮುದಿಮುದುಕ ಮಹಾಶಯನಿರುವನು. ಇವನಿಗೆ ಸುಮಾರು ೯ ವಿವಾಹಗಳಾದುವು. ಕಡೇಯವಳು ಮೊನ್ನೆ ಸ್ವರ್ಗಕ್ಕೆ ಹೋದಳು. ಈಗ ಇವನಿಗೆ ಪುನಃ ಒಂದು ವಿವಾಹವಾಗಬೇಕಂತೆ. ಅದರಲ್ಲೂ ಎಳೇ ಪ್ರಾಯದ ತರುಣಿಯನ್ನೇ ಆಗಬೇಕೆಂದು ಬಯಸಿರುವನು. ಮೊನ್ನೆ ಇವನು ಲಂಡನಿಗೆ ಹೋಗಿದ್ದನು. ಇವನನ್ನು ಕಾಣಲು ಸಾವಿರಗಟ್ಟಳೆ ಜನರು ಮುತ್ತಿದರು. ಕೆಲವರು "ಈ ಮುದಿ ಗೂಬೆಗೂ ಮದುವೆ ಬೇಕೇ?" ಎಂದರು.

ಬೆಟ್ಟದೊಡೆಯನ ಹರಕೆ! ತುಲಾಭಾರದ ಅದ್ಭುತ ಕತೆ! ನಂಬಿದವರಿಗೆ ನಾಮ!

ಪಾಲ್ಘಾಟಿನ ಸಮೀಪ ಚಿತ್ತೂರು ಎಂಬ ಹಳ್ಳಿಯಲ್ಲಿ ಶ್ರೀ. ಸುಬ್ರಹ್ಮಣ್ಯರೆಂಬ ಸಾಹುಕಾರರಿದ್ದಾರೆ ಇವರು ಒಳ್ಳೇ ಧರ್ಮಾತ್ಮರೂ ದಾನಶೂರರೂ ಆಗಿರುತ್ತಾರೆ. ಇವರಿಗೆ ಗಂಡು ಸಂತತಿಯೇ ಇರಲಿಲ್ಲ ತನಗೊಬ್ಬ ಮಗನು ಹುಟ್ಟಿದರೆ, ಆ ಮಗನೊಂದಿಗೆ ತಿರುಪತಿಯ ಯಾತ್ರೆಮಾಡಿ, ಮಗನ ತುಲಾಭಾರ ಮಾಡಿಸಿ, ತೂಕದಷ್ಟು ರೂಪಾಯಿಗಳನ್ನು ಶ್ರೀನಿವಾಸ ದೇವರ ಭಂಡಾರಕ್ಕೆ ಹಾಕುವೆನೆಂದು ಆ ಸಾಹುಕಾರರು ಹರಕೆ ಹೇಳಿಕೊಂಡರು. ಶ್ರೀ. ಶ್ರೀನಿವಾಸನು ಅವರ ಮೇಲೆ ಕರುಣೆ ತೋರಿ ಇಚ್ಛಿತ ಸಂತತಿಯನ್ನು ಕೊಟ್ಟನು. ಸಾಹುಕಾರರಿಗೂ ಆನಂದವಾಯಿತು. ಕೆಲವು ಸಮಯ ಕಳೆದ ಬಳಿಕ, ಶ್ರೀ. ಸುಬ್ರಹ್ಮಣ್ಯರು ಕುಟುಂಬ ಸಮೇತರಾಗಿ ತಿರುಪತಿಗೆ ಹೋದರು. ಶ್ರೀ ಶ್ರೀನಿವಾಸನ ದರುಶನ ಪಡೆದು ತಮ್ಮ ಯೋಗ್ಯತೆಗನುಸಾರವಾಗಿ ತರತರದ ಸೇವೆಗಳನ್ನು ಮಾಡಿ, ಮರಳಿದರು. ಹರಕೆ ಹೇಳಿಕೊಂಡ ಸಂಕಲ್ಪದಂತೆ, ತುಲಾಭಾರ ಮಾತ್ರ ಅರ್ಪಣೆಯಾಗಲಿಲ್ಲ. "ಹರಕೆ ಹೇಳಲಿಕ್ಕೊಂದು ದಿನ, ಅದನ್ನು ಸಲ್ಲಿಸಲಿಕ್ಕೆ ಒಂದು ಯುಗ" ಎಂಬಂತಾಯಿತು. ಗಿರಿಯ ಮೇಲಿಂದ ಕೆಳಗಿಳಿಯುತ್ತಿದ್ದಾಗಲೇ ಅವರಿಗೆ ಅಪಶಕುನಗಳು ತೋರಹತ್ತಿದುವು. ಅದನ್ನು ಗಣನೆಗೆ ತಾರದೆ ಸುಬ್ರಹ್ಮಣ್ಯರು ಬೆಟ್ಟದಿಂದಿಳಿದು ಗೋವಿಂದರಾಜ ಪಟ್ಟಣಕ್ಕೆ ತಲ್ಪಿದರು. ಅಲ್ಲಿ ಶ್ರೀ. ಭಟ್ಟರೆಂಬ ಮೆಜಿಸ್ಟ್ರೇಟರ ಮನೆಯಲ್ಲಿ ಉಳಕೊಳ್ಳಲಿಕ್ಕೆಂದು ಅವರ ಮನೆಯ ಹೊಸ್ತಿಲನ್ನು ಹತ್ತುವಷ್ಟರಲ್ಲಿ ಯಾರೋ ಒಬ್ಬನು ಗಟ್ಟಿಯಾಗಿ "ಎಲೋ ಸುಬ್ರಹ್ಮಣ್ಯ, ಬಂದ ಹಾಗೆ ಹಿಂದಿರುಗಿದೆಯಾ? ಮಗನ ತುಲಾಭಾರ ಮಾಡಿಸಲಿಲ್ಲವೆ?" ಎಂದು ನುಡಿದು ಅದೃಶ್ಯನಾದನು. ಶ್ರೀ. ಸುಬ್ರಹ್ಮಣ್ಯರು ಈ ಸುದ್ದಿಯನ್ನು ಶ್ರೀ. ಭಟ್ಟರಿಗೆ ತಿಳುಹಿಸಿ, ತುಲಾಭಾರಕ್ಕೆ ಎಷ್ಟು ರೂಪಾಯಿ ತಗಲೀತೆಂದು ಕೇಳಲು, ಮಗನನ್ನು ತೂಕಮಾಡಿದರು. ತೂಕವು ೬೦೦ ರೂಪಾಯಿಯಾಯಿತು. ತುಲಾಭಾರಕ್ಕೂ, ಇತರ ಖರ್ಚಿಗೂ ಬೇಕಾಗುವುದೆಂದು ಶ್ರೀ. ಸುಬ್ರಹ್ಮಣ್ಯರು ಶ್ರೀ. ವಿರೂಪಾಕ್ಷ ಗುರುನಾಥರೆಂಬ ವರ್ತಕ ಕಡೆಯಿಂದ ರೂಪಾಯಿ ೧೨೦೦ನ್ನು ಕೈಕಡ ಪಡೆದುಕೊಂಡು, ಮೆಜಿಸ್ಟ್ರೇಟರ ಸಂಗಡ ತಿರುಪತಿಗೆ ಹೊರಟರು. ಪುಣ್ಯಾರ್ಚನ ವಗೈರೆ ವಿಧಿಗಳನ್ನು ಸಾಗಿಸಿ, ಮಗನನ್ನು ಒಂದು ಪರಡಿಯಲ್ಲಿ ಕುಳ್ಳಿರಿಸಿ ಇನ್ನೊಂದು ಪರಡಿಯಲ್ಲಿ ರೂಪಾಯಿ ೬೦೦ನ್ನು ಹಾಕಿದರು. ಪರಡಿ ಸರಿಯಾಗಲಿಲ್ಲ. ಮತ್ತೂ ೩೨೦ ರೂಪಾಯಿಗಳನ್ನು ಹಾಕಿದ ಮೇಲೆ ಪರಡಿಗಳು ಸರಿಯಾದುವು. ಈ ಸೋಜಿಗವನ್ನು ಕಂಡು ಎಲ್ಲರೂ ಚಕಿತರಾದರು. ದೇವರು ೩೨೦ ರೂಪಾಯಿಗಳನ್ನು ದಂಡಮಾಡಿರಬೇಕೆಂದು ನಂಬಹತ್ತಿದರು. ತುಲಾಭಾರವನ್ನು ದೇವರಿಗೊಪ್ಪಿಸಿ, ಬೆಟ್ಟದಿಂದ ಪುನಃ ಕೆಳಗಿಳಿದು, ಇನ್ನೊಮ್ಮೆ ಮನೆಯಲ್ಲಿ ಹುಡುಗನ ತುಲಾಭಾರ ಮಾಡಿ ನೋಡಿದರೆ ತೂಕವು ೬೦೦ ರೂಪಾಯಿಯಷ್ಟೇ ಇತ್ತು. ತಿರುಪತಿಯ ತಿಮ್ಮಪ್ಪನ ಮಹಿಮೆಯು ಅಗಾಧವೇ ಸರಿ! ಎಂದು ವಿಜಯದಲ್ಲೊಂದು ವಾರ್ತೆ. ವಾಚಕರೇ! ಇದು ಅಲ್ಲಿಯ ಭಟ್ಟರುಗಳ ಚಮತ್ಕಾರವಲ್ಲವಷ್ಟೆ! ಹಾಗಾದರೆ ಸಂತೋಷ!!! ಕಾರಣ, ಇಂತಹ ಮರೆಮೋಸಗಳು ಹಿಂದೂ ಸಮಾಜದ ಕೆಲ ಪವಿತ್ರ ಸ್ಥಳಗಳಲ್ಲಿ ಕಡಿಮೆಯಾಗಿರುವುದಿಲ್ಲ.

ಮೋಸಗಾರ "ಮಹಾತ್ಮ"

ಹಣವು "ಮಹಾತ್ಮ"ರನ್ನು ದುರಾತ್ಮರನ್ನಾಗಿ ಮಾಡುತ್ತದೆ. ದುರಾತ್ಮರನ್ನು "ಮಹಾತ್ಮ"ರನ್ನಾಗಿಯೂ ಮಾಡುತ್ತದೆ. ಅನೇಕ ವರ್ಷಗಳ ತನಕ ಸೈನಿಕನಾಗಿದ್ದು ಕೊನೆಗೆ ಕೆಲಸದಿಂದ ನಿವೃತ್ತಿ ಹೊಂದಿದ ಹವಾಲ್ದಾರನೊಬ್ಬನು ಗುಜರಾಥಿನಲ್ಲಿ ದೊಡ್ಡ "ಮಹಾತ್ಮ"ನೆಂದು ಹೇಳಿಕೊಂಡು ಸುದ್ದಿ ಎಬ್ಬಿಸಿದನು. ಅವನ ಬೆಂಬಲವಾಗಿದ್ದ ಅನೇಕ ಮಂದಿ ಶಿಷ್ಯರನ್ನು ನೋಡಿ ಜನರಿಗೆ ಅವನ ಮಹಾತ್ಮೆಯು ಕಂಡು ಬಂತು. ಈ ಮಹಾತ್ಮನು ತನ್ನ ಮಹಿಮಾಶಕ್ತಿಯಿಂದ ನೋಟುಗಳನ್ನು ಒಂದೆಕ್ಕೆರಡಾಗಿ ಮಾಡಬಲ್ಲನೆಂಬ ಶಿಷ್ಯರ ಮೂಲಕ ಪ್ರಚಾರಗೊಳಿಸಿದನು. ಈ ಗುಟ್ಟು ಸರ್ವತ್ರ ಹಬ್ಬಿತು. ಕಾಸಿಲ್ಲದ ಈ ವೇಳೆಯಲ್ಲಿ ಕಾಸು ಮಾಡುವ ಆಲೋಚನೆಯಿಂದ ಅನೇಕ ಮಂದಿ ಲೋಭಿಗಳು ಒಡನೆ ಮಹಾತ್ಮನನ್ನು ಸೇರಿ, ಅವನನ್ನು ಪರೀಕ್ಷಿಸುವುದಕ್ಕಾಗಿ ಐದು ರೂಪಾಯಿಯ ಒಂದು ನೋಟನ್ನು ಕೊಟ್ಟರು. ಮಹಾತ್ಮನು ಅದನ್ನು ತೆಗೆದುಕೊಂಡು ಹತ್ತು ರೂಪಾಯಿಗಳ ಎರಡು ನೋಟುಗಳನ್ನು ತಟ್ಟನೆ ಕೊಟ್ಟನು. ಜನರಿಗೆ ಇದನ್ನು ಕಂಡು ಸಂತೋಷವಾಯಿತು. ಕೆಲವರು ತಮ್ಮ ನೋಟುಗಳ ಕಟ್ಟುಗಳನ್ನು ಅವನೆದುರು ರಾಶಿಯೊಡ್ಡಿದರು. ಕೆಲವರು ಅವನನ್ನು ಗೋಪ್ಯವಾಗಿ ಮನೆಗೆ ಕರೆದು ತಮ್ಮಲ್ಲಿದ್ದ ಸಾವಿರಗಟ್ಟಳೆ ನೋಟುಗಳನ್ನು ಕೊಟ್ಟರು. ಭಾವಾನಗರದಲ್ಲಿ ಹಿಂದೆ ದಿವಾನರಾಗಿದ್ದವರೊಬ್ಬರು ೩೦,೦೦೦ ರೂಪಾಯಿಗಳ ನೋಟುಗಳನ್ನು ಕೊಟ್ಟು ಕಾಸಿಲ್ಲದಂತಾದರು. ಒಬ್ಬ ಮಹಮ್ಮದೀಯ ಐಶ್ವರ್ಯವಂತನು ೫೦,೦೦೦ ರೂಪಾಯಿಗಳ ನೋಟುಗಳನ್ನು ಕೊಟ್ಟು ದರಿದ್ರನಾರಾಯಣನ ಪಾಲಿಗೆ ಸೇರಿದನು. ಕಡೆಗೆ ಈ ಮಹಾತ್ಮನು ನೋಟುಗಳನ್ನು ಶಿಷ್ಯರ ಮೂಲಕವಾಗಿ ಮನೆಗೆ ಸಾಗಿಸುತ್ತಿದ್ದ ಸಂಗತಿಯು ತಿಳಿದು ಬಂತು. ಅವನನ್ನು ಹಿಡಿದರು. ಮೊನ್ನೆ ೨ ವರ್ಷ ಕಠಿಣ ಸಜೆಯು ವಿಧಿಸಲ್ಪಟ್ಟಿತು. "ಅತಿಯಾಶೆ ಗತಿಕೇಡು" ಎಂದು ಧನಿಕರಿಗೆ ಪಾಠ ಕೊಟ್ಟ ಇವನನ್ನು "ಮಹಾತ್ಮ"ನೆಂದರೆ ತಪ್ಪುಂಟೇ?

ಮಕ್ಕಳ ಮೈಮೇಲೆ ಮೆಣಸಿನ ಬೊಕ್ಕೆಯ ಹಾಗೆ ಬಿದ್ದರೆ— (೧) ಅರಳೀ ಮರದ ತೊಗಟೆಯ ರಸವನ್ನು ತೆಗೆದು, ಅದರಲ್ಲಿ ತುಪ್ಪ ಕೂಡಿಸಿ ಕಲ್ಲಿನಿಂದ ಚೆನ್ನಾಗಿ ಅರೆದು ಅದಕ್ಕೆ ಆರತಿ ಕರ್ಪೂರದ ಹುಡಿ ಮಾಡಿ ಹಾಕಿ ಚೆನ್ನಾಗಿ ಅರೆದು ಆ ತುಪ್ಪವನ್ನು ಮೈಗೆ ಹಚ್ಚಬೇಕು.

ವರ್ತಮಾನ ತರಂಗ.

[illegible]ಸ್ವದೇಶ.

[illegible] ಕಾಲ್ಕ [illegible] ಘುಲೇಶ್ವರ ಮೊದಲಾದ [illegible] ಕಡೆಗಳಲ್ಲಿ ಹಿಂದೂ ಮುಸಲ್ಮಾನ [illegible] ಸುಮಾರು ೧೨೦ ಜನರು ಸತ್ತರು. ೧೦೬೫ ಜನರು ಘಾಯಗೊಂಡರು. [illegible]ನ, ಮಸೀದಿ, ಅಂಗಡಿ, ಮನೆಗಳು ಬೆಂಕಿಗಾಹುತಿಯಾದುವು. ಹೆಂಗಸರು [illegible] ಪೆಟ್ಟುಗೊಳಗಾದರು. ಸಶಸ್ತ್ರ ಪೋಲೀಸರು ಗಲಭೆಯೆದ್ದ ಕಡೆಗಳಲ್ಲಿ ಪಹರೆ [illegible]. ಮಾರ್ಗಗಳು ಸೋಡಾ ಬಾಟ್ಲಿ ಚೂರು, ಕಲ್ಲುಮುಳ್ಳುಗಳಿಂದ ತುಂಬಿವೆ. [illegible]ಗಳಲ್ಲಿ ನಡೆಯಲು ಜನರು ಈಗಲೂ ಹೆದರುತ್ತಿರುವರು. ಅನೇಕ ನಿರ್ಗತಿಕರು [illegible] ನಗರದಿಂದ ಓಡಿದರು. ಶೌಕತಾಲಿಯವರು ಸಮಾಧಾನಪಡಿಸುತ್ತಿದ್ದಾರೆ. [illegible]ವಾಗಿ ಹಿಂದೂ ಮುಸಲ್ಮಾನರ ಜತೆಸಮಿತಿಯು ಹೊರಟಿದೆ. ಕೊಂಗ್ರೆಸ್ [illegible]ನ್ನಿಯ ಮೋಟರ್ ಕಾರು ಮುಸ್ಲಿಮರಿಂದ ಹುಡಿಮಾಡಲ್ಪಟ್ಟಿತು. ಪೋಲೀಸರು ಗುಂಡು ಹಾರಿಸಿದರು. ಒಬ್ಬನು ಮಡಿದ ವಾರ್ತೆ ಬಂದಿದೆ. ಪೂನದತ್ತ ಕಡೆ [illegible]ಗಿದ್ದ ಗವರ್ನರರು ಈ ವಾರ್ತೆ ಕೇಳಿ ವಿಮಾನದ ಮೂಲಕ ಮುಂಬಾಯಿಗೆ [illegible]ಪಿರುವರು.

ಚೆನ್ನಪಟ್ಟಣದ ಸಾಹುಕಾರ್ ಮುಡುವಾಗಲಯ್ಯ ಶೆಟ್ಟರೆಂಬವರು ತನ್ನ ಮಗ [illegible] ಚಿಕ್ಕಣ್ಣ ಶೆಟ್ಟರಿಗೆ ವಿದೇಶಿ ವಸ್ತ್ರ ಒಡವೆಗಳ ಆಡಂಭರದಿಂದ ಮದುವೆಮಾಡು [illegible]ವರಲ್ಲಿದ್ದರು. ಆದರೆ ಶ್ರೀಯುತ ಚಿಕ್ಕಣ್ಣನವರು ಸ್ವದೇಶಿ ವಸ್ತುಗಳನ್ನಲ್ಲದೆ ಬೇರೆ [illegible]ವನ್ನು ತಂದರೂ ತಾನು ವಿವಾಹಕ್ಕೆ ಸಮ್ಮತಿಸೆನೆಂದು ಹಠಹಿಡಿದರು. ಕೊನೆಗೆ [illegible]ಮಗನ ಇಚ್ಛೆ ನೆರವೇರಿತು. ಇಂತಹ ಯುವಕರು ನಮ್ಮಲ್ಲೆಷ್ಟು ಮಂದಿ?

[illegible] ತಿಂಗಳ ಮಧ್ಯದಲ್ಲಿ ಲಾಹೋರಿನಲ್ಲಿ ಪ್ರಚಂಡ ಬಿರುಗಾಳಿಯೂ, ಸುಂಟರು [illegible] ಬೀಸಿ ಅನೇಕ ಮರಣಗಳುಂಟಾದುವು. ಸಣ್ಣ ದೊಡ್ಡ ಗುಡಿಸಲುಗಳೂ [illegible] ಸಣ್ಣ ಮನುಷ್ಯರೂ ಗಾಳಿಯೊಡನೆ ಹಾರ್ರ್ಯಾಡಬೇಕಾಯಿತಂತೆ.

ಶ್ರೀಯುತ ವಲ್ಲಭಭಾಯಿ ಪಟೇಲರ ಸೊಸೆ ಶ್ರೀಮತಿ ದಯಾಭಾಯಿ ಎಂಬವರು ಕಳೆದ ಮೇ ತಿಂಗಳಲ್ಲಿ ವಲ್ಲಭಭಾಯಿಯವರನ್ನು ಸೆರೆಮನೆಯಲ್ಲಿ ನೋಡಿ ಹಿಂದೆ [illegible]ದರು. ಮರುದಿನ ಶ್ರೀಮತಿಯವರು ಆಕಸ್ಮಾತ್ ತೀರಿಹೋದರು.

ಬಂಗಾಳದ ಸಮೀಪ ಖುಲ್ನಾ ಎಂಬಲ್ಲಿಯೂ ಭಯಂಕರ ಗಾಳಿ ಬೀಸಿ, ಸುಂಟರು [illegible] ತೊಡೆದು ೬ ಮಂದಿಗಳು ಮಡಿದರು. ನೂರು ಜನರಿಗಿಂತ ಮಿಕ್ಕಿ ಘಾಯ [illegible]. ಜಾನುವಾರುಗಳು ಅಸಂಖ್ಯಾತವಾಗಿ ಸತ್ತವು.

ರಾಜಮಹೇಂದ್ರಿಯ ವಾರಂಗಲ್ಲು ಎಂಬಲ್ಲಿ ೧೨೦೦ನೇ ಇಸವಿಯ ಜೈನ [illegible]ವೊಂದು ದೊರಕಿದೆ.

ಸಜಿಗಂಜ್ ಎಂಬಲ್ಲಿ ಸಿಡಿಲು ಬಡೆದು ೧೫ ಮಂದಿಗಳು ಏಕಕಾಲದಲ್ಲಿ ಮಡಿ[illegible]. ಕೆಲವರು ವಿಷಮಾವಸ್ಥೆಯಲ್ಲಿರುವರು.

[illegible]ನಲ್ಲಿ ಒಬ್ಬ ತರುಣಿಯು ತನ್ನ ಮುದಿ ತಾಯಿಯೊಡನೆ ರಾತ್ರಿ ಮಲಗಿ [illegible]ರರು ಒಳಹೊಕ್ಕು ಇಬ್ಬರನ್ನೂ ಕತ್ತಿಯಿಂದ ತಿವಿದು ಇದ್ದುಬದ್ದು [illegible]ರು.

[illegible] ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರನ್ನು ಒಬ್ಬ ಯುವಕನು ಗುಂಡಿನಿಂದ [illegible]ದನು. ಅವನನ್ನು ಸೆರೆಹಿಡಿದಿದ್ದಾರೆ.

[illegible] ಕಲೆಕ್ಟರರಾದ ಚಾರ್ಲ್ಸ್ ಹೆಂಡರ್ಸನ್ನರೆಂಬವರು ತನ್ನ ಮನೆಯ [illegible] ಕಾಲು ಜಾರಿ ಬಿದ್ದು ಜಖಂಗೊಂಡಿರುವರು.

[illegible] ಒಬ್ಬ ಹೆಂಗಸು ಒಂದು ಸಲಕ್ಕೆ ನಾಲ್ಕು ಮಕ್ಕಳನ್ನು ಹೆತ್ತಳು. [illegible] ಬೇಕಾದರೂ ಹೆರಲಿ! ಕ್ಷೇಮದಿಂದಿದ್ದರಾಯಿತು.

ವಿದೇಶ.

ಜಪಾನಿನ ಟೋಕಿಯೋ ನಗರದಲ್ಲಿದ್ದ ಜಪಾನ ಪ್ರಧಾನ ಮಂತ್ರಿಯವರ ಅರಮನೆಯನ್ನು ಒಬ್ಬ ಜಪಾನ ಸೈನಿಕನು ಹೊಕ್ಕು, ಒಬ್ಬ ಅತಿಥಿಯೊಡನೆ ಮಾತನಾಡುತ್ತಿದ್ದ ಪ್ರಧಾನಮಂತ್ರಿವರ್ಯರಾದ ಇನುಕೇ ಎಂಬವರನ್ನು ಗುಂಡಿನಿಂದ ಕೊಂದಿಕ್ಕಿದನು. ಕೊಲೆಗಾರನನ್ನು ಹಿಡಿದರು.

ಫ್ರಾನ್ಸ್ ದೇಶದ ಪೆರಿಸ್ ನಗರದಲ್ಲಿಯ ದಾರಿಯ ಮೇಲೆ ರಶ್ಯನ್ ಕ್ರಾಂತಿಕಾರನೊಬ್ಬನು ಫ್ರೆಂಚ್ ಪ್ರಧಾನ ಮಂತ್ರಿಯವರಾದ ಎಂ. ಡೂಮರ್ ಎಂಬವರನ್ನು ಗುಂಡಿಕ್ಕಿ ಕೊಂದನು. ಮೇಲಿನ ಎರಡು ಮರಣಗಳಿಂದ ಇಡೀ ಪ್ರಪಂಚವು ಬೆರಗುಗೊಂಡಿದೆ.

ಸ್ವೀಡಿಶ್ ಬೆಂಕಿಪೆಟ್ಟಿಗೆಯ ಕಂಪೆನಿಯ ಮ್ಯಾಲಿಕನಾದ ಮಿಲಿಯಾಧಿಪತಿ ಕ್ರೂಗರ್ ಎಂಬವರು ಆತ್ಮಹತ್ಯೆ ಮಾಡಿಕೊಂಡರಷ್ಟೆ! ಅವರ ಲೆಖ್ಖಪತ್ರಗಳಲ್ಲಿ ತುಂಬಾ ಮೋಸವು ಕಂಡುಬಂದಿರುವುದರಿಂದ ಗುಮಾಸ್ತರು, ಲೆಖ್ಖ ಪರಿಶೋಧಕರು ಮೊದಲಾದವರನ್ನು ಕೈದುಮಾಡಿದರು.

ನ್ಯೂಯೋರ್ಕ್ ಪಟ್ಟಣದಲ್ಲಿ ಕರ್ನಲ್ ಲಿಂಡ್‌ಬರ್ಗ್ ಎಂಬವರ ಶಿಶುವನ್ನು ಡಕಾಯಿತರು ಕದ್ದೊಯ್ದರಷ್ಟೆ. ಆ ಶಿಶುವಿನ ಪತ್ತೆ ಮಾಡಲು ಇಡೀ ಅಮೇರಿಕವು ಯತ್ನಿಸಿತು. "ಮಗು ಸತ್ತಿರುವುದಿಲ್ಲ. ಸುರಕ್ಷಿತವಾಗಿದೆ. ನಮಗೆ ೫೦,೦೦೦ ಡೊಲ್ಲರು ಕೊಡಿರಿ" ಎಂದು ಕಳ್ಳರು ರಹಸ್ಯವಾಗಿ ಪ್ರಕಟಿಸಿದರು. ಮಗುವಿನ ತಂದೆಯು ಹಣವನ್ನು ಒಂದು ಗವಿಯಲ್ಲಿಟ್ಟು ಕಳ್ಳರಿಗೆ ದೊರೆಯುವಂತೆ ಮಾಡಿದರು. ಆದರೆ ಅಷ್ಟು ಹಣವನ್ನು ಪಡೆದಾದ ಮೇಲೂ ಕಳ್ಳರು ಶಿಶುವನ್ನು ಕೊಡಲಿಲ್ಲ. ಕಳೆದ ತಿಂಗಳ ತಾ. ೧೧ನೇ ತಾರೀಕಿನ ದಿನ ಆ ಮಗುವಿನ ಮೃತದೇಹವು ಒಂದು ಪೊದರಿನಲ್ಲಿ ದೊರೆಯಿತು. ತಂದೆತಾಯಿಗಳ ದುಃಖವು ಅಪಾರವಾಗಿದೆ. ಈ ಭೀಷಣಕೃತ್ಯದಿಂದಾಗಿ ಅಮೇರಿಕ, ಯುರೋಪ್ ಖಂಡಗಳ ಕಳ್ಳರ ಮೇಲೆ ಕಠಿಣ ಕಾಯಿದೆಯು ಬರುವುದು. ಲಿಂಡ್‌ಬರ್ಗ್ ಮಗುವಿನ ಕಥೆಯು ಇಡೀ ಪ್ರಪಂಚದ ದೃಷ್ಟಿಯನ್ನು ಆಕರ್ಷಿಸಿದ್ದು ಕಳ್ಳರ ಪತ್ತೆಯನ್ನು ಮಾಡಲೇ ಬೇಕೆಂದು ಸರಕಾರವು ನಿರ್ಧರಿಸಿದೆ.

ರಾಜ್ಯಪಾಳ್ಯದಲ್ಲಿ ಇನ್ನೊಬ್ಬ ಸ್ತ್ರೀಯು ಒಂದು ಮಗುವನ್ನು ಹೆತ್ತಳು. ಅದಕ್ಕೆ ೬ ಇಂಚು ಉದ್ದದ ಬಾಲವಿದ್ದಿತು. ಹನುಮಂತನೋ ಏನು?

ಫೆಬ್ರುವರಿ ತಿಂಗಳಲ್ಲಿ ಇಡೀ ಹಿಂದೂದೇಶದಲ್ಲಿ ಒಟ್ಟು ೫೦೧ ಪುನರ್ವಿವಾಹಗಳು ಆಚ್ಛುವು. ಪುರಾಣ ಮತವಾದಿಗಳು ಗಲಾಟೆಯನ್ನೇಕೆ ಎಬ್ಬಿಸಲಿಲ್ಲವೋ?

ವನಮಲಾಯಿ ಮಠದ ಶ್ರೀ। ಸ್ವಾಮಿಗಳವರು ೫೦ ಸಾವಿರ ರೂಪಾಯಿ ಖರ್ಚು ಮಾಡಿ ಭಂಗಾರದ ಒಂದು ರಥವನ್ನು ಕಟ್ಟಿಸಿರುವರಂತೆ. ದ್ರವ್ಯ ವಿನಿಯೋಗಕ್ಕೆ ಮಾರ್ಗ ಬೇಡವೇ?

ಲಾಹೋರು, ಅಲ್ಲಹಾಬಾದು, ಬೆನಾರಿಸ್, ಮದ್ರಾಸ್, ಮುಂಬಾಯಿಗಳಲ್ಲಿ ಟಪ್ಪಾಲು ಪೆಟ್ಟಿಗೆಗಳಲ್ಲಿದ್ದ ಅಂಚೆ ಕಾಗದಗಳನ್ನು ಯಾರೋ ಪುಂಡರು ಸುಡಲೆತ್ನಿಸಿದರು.

ಕಲ್ಕತ್ತೆಯಲ್ಲಿ ಮುಕುಂದಲಾಲ್ ಎಂಬವನೊಬ್ಬನು ತನ್ನ ಪ್ರಥಮ ಪತ್ನಿಯನ್ನೂ ಅವಳ ಮಗನನ್ನೂ ಮನೆಯಿಂದ ಹೊರಹಾಕಿ ಎರಡನೆಯವಳ ಕೈಹಿಡಿದು ಮನೆಗೆ ಕರೆದು ತಂದನು. ಮಗನು ತಂದೆಯ ಮೇಲೆ ದಾವೆ ಹೂಡಿದ್ದಾನೆ.

ಲಕ್ನೋವಿನ ಷಹಗಂಜಿ ಎಂಬಲ್ಲಿ ಬೆಂಕಿಯೆದ್ದು ಅನೇಕ ಕಟ್ಟಡಗಳು ಧ್ವಂಸವಾದುವು. ೧೦೦೦೦ ರೂಪಾಯಿ ನಷ್ಟವಾಗಿದೆ.

(TIT-BITS.) ಆಟದ ನೋಟ. (ಟಿಟ್-ಬಿಟ್ಸ್.)

ಭೂಂ ಭೂಂ, ಪೂಂ ಪೂಂ, ಶಂಖದ ರಾಗ ಭೊಂ ಭೊಂ! ಕೊಂಬಿನ ಕೂಗು ಕೂಂ ಕೂಂ,–ನಮಸ್ಕಾರ ರಾಯರೇ ಭೊಂ ಭೊಂ. ಮುಂದಕ್ಕೆ ಒಳ್ಳೇದುಂಟು ದೇವ್ರೆ, ಪೂಂ, ಪೂಂ. ಒಳ್ಳೆಯವರಾದರೆ ನಿಮಗೆ ವೈರಿಗಳಿಲ್ಲ ಕೇಳ್ರಿ. ನಿಮ್ಮ ದೇವಿಯವರ ಕೈ ಬಹಳ ಒಳ್ಳೇದು ರಾಯ್ರೇ. ಭೂಂ–ಭೂಂ. ಮೈಸೂರಿಂದ ಬಂದೆಪ್ಪ ನರ್ಸಣ್ಣ. ಒಂದು ಪಾವಲಿ ಎರಡು ಚಕ್ರ ಕೊಡಿರಯ್ಯ ಮಾರಾಯರೇ. ಭೊಂ ಭೊಂ—ಭೋ–ೀ–ೀ–ೀ–ೀ.

* * * *

ನಿಮ್ಮೂರ ಮೇಲೆ "ಬಡವ್ರ ಬಂಧು" ಎಂಬ ಪತ್ರಿಕೆ ಒಂದು ಹೊರ್ಟಿದೆ ಎಂಬ ಸುದ್ದಿ ಕೇಳ್ದೆ ರಾಯ್ರೇ. ಅದು ಬಹಳ ಸೊಗಸಂತೆ ದೇವ್ರೆ. ಅದನ್ನು ಎಲ್ಲರೂ ಹೊಗಳ್ತಾರಂತೆ ಕೇಳ್ರಿ. ಶಹಭಾಸ್ ಶಹಭಾಸ್–ನರ್ಸಣ್ಣಗೆ ಕೊಡಿ ಒಂದು ರೂಪಾ—ಪೂಂ—ಪೂ—ೂ—ೂ—ೂ—ಂ.

* * * *

ಬಡವರ ಬಂಧುವಿನಲ್ಲಿ ಪ್ರಕಟವಾಗಿದ್ದ ಕೆಲ ಕಥೆ ಹಾಸ್ಯಂಗಳು ಒಬ್ಬರನ್ನು ಚೆನ್ನಾಗಿ ನಗಿಸಿತಂತೆ! ನಗಿರಿ ಸ್ವಾಮಿ ನಗಿರಿ! ಪ್ರಾಣಕ್ಕೆ ಅಪಾಯ ಬಾರದಂತೆ ನಗಿರಿ.

* * * *

ಆ ಕಥೆ ಪದ್ಯಗಳಲ್ಲಿದ್ದ 'ಲವ್' ಪ್ರಸಂಗಗಳು ಎಲ್ಲರಿಂದಲೂ ಶ್ಲಾಘಿಸಲ್ಪಟ್ಟವಂತೆ. ವಕೀಲ್ರು, ಗುಮಾಸ್ತರು, ಗ್ರಹಸ್ಥರು, ಸದ್ಗ್ರಹಸ್ಥರು, ಇದ್ದವರು, ಇಲ್ಲದವರು ಎಲ್ರೂ ಅದನ್ನು ಹೊಗಳಿದ್ದಾರಂತೆ. ಅಣ್ಣಾ ಹೀಗೆ ಯಾಕೆ ಹೊಗಳ್ತೀರಿ? ಹೊಗಳಿ! ಹೊಗಳಿ! ನಂಗೆ ಸಂತೋಷಾ ಆಗುತ್ತೆ. ಹೊಗಳಿ!

* * * *

ಎಲ್ಲಾ ಚಂದಾದಾರರು ತಮ್ಮ ಬಾಕಿ ಹಣಕೊಡಬೇಕೆಂದು ಹೇಳಲಿಕ್ಕೆ "ದಿವ್ಯ ದೃಷ್ಟಿ"ಯಾದ ನನ್ನ ಕೂಡೆ ಸಂಪಾದಕ್ರು ಹೇಳಿದ್ದಾರೆ (ಹೌದು. ಸಂ. ಬ. ಬ.) ಕೊಟ್ಬಿಡಿ ಸ್ವಾಮಿ ಕೊಟ್ಬಿಡಿ. ಅವರ ಹಣಾ ಕೊಟ್ಬಿಡಿ. ಹೊಗಳಿದ್ರೆ ತೆಗಳಿದ್ರೆ ಗಾಳಿಗೆ ಹೋಯ್ತು. ಕಾಸು ಕೊಟ್ರೆ ಸಂಪಾದಕರ ಜೇಬಿಗೆ ಬಿತ್ತು.

* * * *

ನೋಡಿ ರಾಯ್ರೆ! ನಿಮ್ಮೂರ ಬಡವರ ಬಂಧುವಿನ ಕುರ್ತು "ನವಯುಗ" "ಇದರಲ್ಲಿ ವಾಚನೀಯ........ಲೇಖಗಳಿವೆ" ಎಂದಿದೆ. ನಿಮ್ಮೂರ ಇಂಗ್ಲಿಷ್ "ಹೆರಾಲ್ಡ್ "......It will not be a loss if a small annual subscription at Re 1 is paid for the journal. We wish it full success" ಎಂದಿದೆ.

* * * *

ಭಂ ಭುಂ ಭುಂ ಭುಂ ಭಂ. ಮಂಗ್ಲೂರವರೆಲ್ರೂ ಮಹಾ ಧನಿಕರೆಂದು ಊರೂರು ಸುದ್ಧಿ. ನಮ್ಮ ಮೈಸೂರು ರಾಜಧಾನಿಯಲ್ಲಿ ಮಂಗ್ಲೂರವರ ಮಾತೇ ಮಾತು 'ಸಿನೆಮಾ, ನಾಟಕ, ಡಾನ್ಸಿಂಗ್ ಗಳಿಗೆ ಇಲ್ಲಿಯ ಜನರು ಪೆರಿಸ್ ದೇಶದವರಂತೆ ಹೋಗ್ತಾರೆ. ಅಚ್ಛ! ಹಾಗಾದರೆ "ಬಡವ್ರ ಬಂಧು"ವಿಗೆ ಏಕ್ ರೂಪಾ ಏಕೆ ಕೊಡಬಾರದು? ಅದನ್ನು ವರ್ಷ ವರ್ಷ ಓದಿಕೊಳ್ಳಿ. ಜೈ–ಮಹಾ—ಬಡವ್ರ ಬಂಧೂಕೀ.

* * * *

ನಿಮ್ಮೂರಲ್ಲಿ ಜೈ ಹಾಕ್ಬಹುದಲ್ಲಾ ಸ್ವಾಮಿ. ನಿಮ್ಮೂರಾ ಕಾನೂನ್ ಗೀನೂನ್ ನಂಗೆ ತೆರಿಯಾದ್. ಹೆದ್ರಿಕೆ ಆಗುತ್ತೆ ಹೆದ್ರಿಕೆ. ಎಲ್ಲಿ ನರ್ಸಣ್ಣನ ಹಲ್ಲು ಗಿಲ್ಲು ಹೋಗ್ಬಿಡ್ತದೋ ಎಂತ. ಹಾಕ್ಬಹುದಲ್ಲಾ ಜೈ. ಅವರಿಗೆ ಇವರಿಗೆ ಹಾಕುವುದಿಲ್ಲ ಜೈ. ಜೈ! ಮೈಸೂರ್ ನರ್ಸಣ್ಣಾಕೀ ಜೈ! ಜೈ!! ಜೈ!!!

* * * *

ಇದೇನ್ರಿ ನಾನು ನಂಗೇನೇ ಜೈ ಹಾಕಿಕೊಂಡೆ! ಹೋಗ್ತೀನಿ ಚಂದದ ಅಕ್ಕಂದಿರೇ. ಬರ್ತೀನೆ ಅಂದದ ಅಣ್ಣಂದಿರೇ. ನಂಗೆ ಚಮ್ಮಾರ ಗಲ್ಲಿ, ರಥಬೀದಿ, ಹಂಪನಕಟ್ಟೆ, ಮೈದಾನು ಎಲ್ಲಾ ಇನ್ಸ್‌ಪೆಕ್ಟ್ ಮಾಡಲಿಕ್ಕಿದೆ. ಬೀಳ್ಕೊಂಡೆ ದೇವ್ರೆ—ಎದ್ಕೊಂಡೆ ರಾಯ್ರೇ. ಹೋಗುತ್ತೇನೆ. ಭೂಂ—ಭೂಂ—ಭೂಂ—ೀ—ೀ—ೀ—ೀ—ಂ!

* * * *

ಒಹೋ! ಇದು ಚಮ್ಮಾರಗಲ್ಲಿಯೋ? ಇದೇನ್ರಿ ಈ ಸಿಟಿಯ ಇದೊಂದು ಭಾಗ ಇಷ್ಟು ಕೊಳಕು. ಮಂಗ್ಲೂರಲ್ಲೂ ತೋಟ ಸಿಂಗಾರ ಒಳಗೆ ಗೋಳಿಸೊಪ್ಪು ಇದೆಯೇ? ಚಮ್ಮಾರರ ಮನೆ ಗುಡಿಸಲುಗಳು ಇಷ್ಟು ಹೂಂ ಹೂಂ ಸ್ಥಿತಿಯಲ್ಲಿದ್ರೆ ಯಾರಿಗಯ್ಯಾ ಹೆಸ್ರು? ನಾಸಿಲ್ಲಿ ನಿಲ್ಲಲಾರೆ. ಹೂಂ ಹೂಂ–ಭೂಂ ಭೂಂ. ಭುಂಂಂಂಂಂ!

* * * *

ಇದೇನ್ರಿ ಹೂವಿನ್ಮಾರ್ಕೇಟೇ? ಇದ್ರ ಹೆಸ್ರು ಭಾರೀ ದೊಡ್ಡದಲ್ಲೇ? ನಮ್ಮೂರಿಗೂ ಇದರ ಹೆಸರು ಬಂದಿದೆ. ಏನ್ರಯ್ಯಾ ಕೌನ್ಸಿಲ್ರೇ? ಇದೇನ್ರಿ? ಇಷ್ಟು ದೊಡ್ಡ ನಾಗರೀಕ ಪೇಟೆಗೆ ಇಷ್ಟ ರಿಚೆಡ್ ಕಂಡೀಷನ ಮಾರ್ಕೇಟೇ?

* * * *

ಇದನ್ನು ಒಳ್ಳೇದು ಮಾಡಿ ರಾಯರೇ, ಒಳ್ಳೇದು ಮಾಡಿ! ಅಥವಾ ಬೇರೆ ಕಡೆಗೆ ಒಯ್ದುಬಿಡಿ. ಸಾವಿರಾರು ಜನರು ಹೋಗಿ ಬರುವ, ವ್ಯಾಪಾರಮಾಡುವ ಇಂತಹ ಜಾಗಾವು ಒಳ್ಳೆ ಅಚ್ಛಾ ಸ್ಥಿತಿಯಲ್ಲಿರಬೇಕಯ್ಯಾ!

* * * *

ನಾನು ವೆಬ್‌ಸ್ಟರ್ ಮಾರ್ಕೆಟಿಗೂ ಹೋಗ್ತೇನೆ. ನನ್ನ ಇನ್ಸ್‌ಪೆಕ್ಷನ್ ಇಲ್ಲದೆ ಮಂಗ್ಲೂರಿಗೆ ಇಂತಹ ಸ್ಥಿತಿ ಬಂದುಬಿಟ್ಟಿತು.

* * * *

ಒಹೋ ಓಹೋ ಓ–ೀ–ೀ–ೀ ಹೋ–ೀ–ೀ. ಇದು ವೆಬೆಸ್ಟರ್ ಮಾರ್ಕೇಟೇ? ಮೀನ್ಮಾರ್ಕೇಟೇ? ಏನು ಸೊಗಸಿಲ್ಲಾ ಸ್ವಾಮಿ! ಏನು ಸೊಗಸಿಲ್ಲಾ! ನಂಗೀಗ ೬೦ ವರ್ಷ ಆಗಿದೆ. ಆದ್ರೂ ಇದೆಲ್ಲ ಮುಂದ ಕಣ್ಣಿಂಗೆ ಹಿಡಿವುದಿಲ್ಲಾಪ್ಪಾ ಹಿಡಿವುದಿಲ್ಲ. ಇದನ್ನು ಒಳ್ಳೆ ಕಿಲಿನ್ ಗಿಲಿನ್ ಮಾಡ್ರಯ್ಯಾ.

* * * *

ಅದೇನ್ರಿ ಹಂಪನಕಟ್ಟೆಯೋ? ಬಹಳ ಲಯಾಕ್ಕಿದೆ ಅಲ್ಲಾ. ದೂರದಲ್ಲಿ ಅದೇನ್ರಿ 'ಪಬ್ಲಿಕ್' ದೊಡ್ಡ ಮೈದಾನೇ? ಅಚ್ಛಾ ಅಚ್ಛಾ ನಿಮ್ಮ ದೇಸಕ್ಕೆ ಇದರಿಂದ ಮೋಸವಿಲ್ಲ.

* * * *

ಇಲ್ಲಿ ಹೆಡ್ ಪೋಸ್ಟಾಫೀಸಿನ ಬಳಿ ಪೋಲೀಸ್ ಸ್ಟೇಶನ್ ಇದೆಯೆಂದು ಕೇಳಿದ್ದೆ. ಒಹೋ ಇದೇಯೋ ನಿಲ್ಲಿ, ನಿಲ್ಲಿ, ನಿಲ್ಲಿ. 'ಇದನ್ನು

ದಾಸವಾಳದ ಹೂ ತಂದು ಹಾಲಿನಲ್ಲಿ ಅರೆದು ತಲೆಗೂ, ಸರ್ವಾಂಗಕ್ಕೂ ಲೇಪಮಾಡಿಕೊಂಡು ಸ್ನಾನ ಮಾಡುತ್ತಾ ಬಂದರೆ ಕೂದಲು, ಶರೀರವೂ ಸಹಾ ಮೃದುವಾಗುತ್ತದೆ. ಕೂದಲು ಚೆನ್ನಾಗಿ ಬೆಳೆಯುತ್ತದೆ. ಉಷ್ಣಾಧಿಕ್ಯವು ಕಡಿಮೆಯಾಗುತ್ತದೆ.

[illegible] ಶಂಖ ಊದಲು ಮನಸ್ಸಾಗುತ್ತೇ. ಭೊಂ! ಭೊಂ, [illegible]–ಊ–ಊ–ಂ. ಹೂಂ ಇದೇನ್ರಿ ನಾತ ಬರ್ತೆ! ಓಹೋ– [illegible]. ಪೋಲೀಸ್ ಪಾಯಿಖಾನೆ ಬೀದಿಗೆ ಕಾಣುತ್ತದೆ.

* * * *

[illegible]ಲೋ ಶಂಖ! ನಾನೂ ನೀನು ಇಲ್ಲೇಕೆ ಬಂದೆವಪ್ಪಾ. ನನ್ನ [illegible]ಲ್! ನನ್ನ ರುಮಾಲ್! ಹೂಂ ಹೂಂ ನಾತ!! ಮೂತ್ರ ನಾತದ [illegible]ಳಿಯೊಡನೆ ಸಂಜೆಯ ತಂಗಾಳಿ ಬೀಸುತ್ತದೆ! ಹೊಟೆಲ್ ಗಿಟೆಲ್ [illegible] ಗಿಂಗ್ಡಿ ಇರುವಾಗ ಇದ್ರ ನಾತ ಬೇಡಾ ಎನ್ನಾರದೇ? ಇಲ್ಲಿಂದ [illegible] ಸ್ವಾಮಿ ಓಡ್ತೇನೆ.

* * * *

ಮೊನ್ನೆ ಮುಂಬಾಯಿ ಮೇಲೆ ನಾನಿದ್ದೆ. ಶೌಕತಾಲಿಯವರಿಗೂ [illegible] ಬಾರಿ ದೋಸ್ತಿ. ಅವರಿಗೂ ೬೦ ವರ್ಷ ಪ್ರಾಯ. ನನಗೂ [illegible] ವರ್ಷ ಪ್ರಾಯ. ನನ್ನ ಹೊಟ್ಟೆಯು ದೊಡ್ಡದು. ಅವರಾ ಪಟಾ [illegible]?

* * * *

ಮೊನ್ನೆ ಅವರಿಗೆ ಒಬ್ಬ ಎಳೆ ಪ್ರಾಯದ ರಮಣಿಯೊಡನೆ ವಿವಾಹ [illegible]ಯಿತು. ಸಿಲ್ಲಿ ಸಿಲ್ಲಿ ನಗಬ್ಯಾಡಿ–ನಕ್ಕರೆ ಮೆಲ್ಲ ನಕ್ಕು ಬಿಡಿ!

* * * *

ಶೌಕತಾಲಿಯವರಿಗೆ ೬೦ ಆಯಿತೆಂದೆ. ಅವರು ಮದುವೆ ಆಗ [illegible]? ಇಬ್ಲಿಸ್ ಹುಡ್ಗಿ ಸಿಕ್ಕಿದ್ದಾಳೆ. ಯಾರು ಬೇಡಾ ಅಂತಾರೆ? [illegible]ಣ್ಣಗೊಂದು ಹುಡ್ಗಿ ಸಿಕ್ಕೀತೇ?

* * * *

ನೋಡಿ, ಶೌಕತಾಲಿಯವರು ೧೮ ವರ್ಷ ಹೆಂಡ್ತಿ ಇಲ್ಲದೆ ಕಲ್ಲಿ [illegible] ಕುಳಿತುಬಿಟ್ಟರು. ಎಷ್ಟು ಕಷ್ಟ ನೋಡಿ! ನೀವೆ ಯೋಚಿಸಿ! [illegible] ನಿಮ್ಗೆ ಅದು ಸಾಧ್ಯವೇ?

* * * *

ನನ್ನ ಹೆಂಡ್ತಿ ತಂಗಮ್ಮಳೂ ತೀರ್ಕೊಂಡು ಕೆಲ ವರ್ಷ ಆಯಿತು. [illegible] ಒಂದೂ ಒಳ್ಳೆ ಹುಡ್ಗಿ ಬೇಕಾಗಿದೆ. ಹೋಗ್ತೇನೆ ಲಂಡನ್, [illegible]ರಿಕಾ ಮೇಲೆ. ಶೌಕತಾಲಿಯವರಿಗೆ ಸಿಕ್ಕಿತು. ನಂಗೆ ಸಿಕ್ಕದೇ! ಈಗ ಮದುವೆ ಆಗ್ಬೇಕು ಯುವಕ್ರಲ್ಲ; ಮುದುಕ್ರು, ಮುದುಕಿಗಳು, [illegible] ಮಜಾ. ತಿಳಿಯಿತೇ? ನನ್ನ ಮದ್ವೆಗೆ ನಿಮ್ಗೆ ಇನ್‌ವಿಟೇ[illegible] ಕೊಡ್ತೇನೆ.

* * * *

ಇಲ್ಲಿಯ ಅನೇಕ ಹಿಂದೂಗಳ ಮನೆಯಲ್ಲಿ ಸಣ್ಣ ಸಣ್ಣ ಮಕ್ಕ[illegible] ಮದುವೆಯಾಯಿತಲ್ಲ. ಇಂತಹ ಬಾಲ್ಯವಿವಾಹಗಳನ್ನು ಆಗ [illegible] ಮಂಗ್ಳೂರ ಮುಖ್ಯಸ್ಥರೆಲ್ಲಾ ಬಿಡುವುದೇ? ನಾಚಿಕೆ ಅಪ್ಪಾ [illegible]!

* * * *

"ನವಗ್ರಹಗಳ ಪೂರ್ಣ ಅನುಗ್ರಹವಿದ್ದ," ಬಡವರ ಬಂಧು [illegible] ದೊಡ್ಡವರು ನೋಡಿ ಮುಖ ದೊಡ್ಡದು ಮಾಡಿಕೊಳ್ಳುವುದು [illegible] ದೇವ್ರೆ. ದೊಡ್ಡವರು ಮುಖ ದೊಡ್ಡು ಮಾಡಿದ್ರೆ ಬಡವರಿಗೆ [illegible]ದರಿಕೆ ಆಗುವುದಿಲ್ವೇ?

ಸೈಕಲ್

ಲೇಖಕರು:–ಶ್ರೀ ನು. ಜಾ.

ಏಸೋ ತರುಣ ಸ್ನಾಯುವಿನ ಪ್ರೇರೇಪಣೆಯಿಂದಾಗಿ, ಒಂದು ಸುಂದರವಾದ ಸೈಕಲನ್ನು ಪಡೆದುಕೊಂಡೆ. ಎಷ್ಟೋ ಕಾಲದಲ್ಲಿ ಮನದೊಳಗೆ ಧಿಮಿಧಿಮಿಸುತ್ತಿದ್ದ ಹಂಬಲವನ್ನು ಪೂರ್ತಿಗೊಳಿಸಿದೆ. ನವತರುಣನು ನವತರುಣಿಯನ್ನು ಭಂಗಾರ, ಸೀರೆ ಕುಪ್ಪಸಗಳಿಂದ ಅಲಂಕರಿಸುವಂತೆ ನನ್ನ ಸೈಕಲನ್ನೂ ಹೊಸ "ಬೆಲ್" "ಹೋರ್ನ್" "ಲೇಂಪ್" ಮೊದಲಾದ ಉಪಕರಣಗಳಿಂದ ಶೃಂಗರಿಸಿದೆ.

ನನ್ನ ಆನಂದಕ್ಕೆ ಎಣೆಯುಂಟೇ?—ನನ್ನ ಉತ್ಸಾಹಕ್ಕೆ ಮಿತಿಯುಂಟೇ?—ಬಿಡುವಿನ್ದ ಯಾವ ಸಮಯದಲ್ಲೂ ನಾನಿರುವುದು ಸೈಕಲ ಮೇಲೆ! ಆದಿತ್ಯವಾರ ದಿನವಂತೂ ನನ್ನ ಸೈಕಲ್ "ರೈಡ್"ಗೆ ಮೇರೆಯಿಲ್ಲ! ಮಧ್ಯಾಹ್ನದ ಬಿಸಿಲೆನ್ನದೆ, ದೇಹ ಶ್ರಮವನ್ನು ಗಣಿಸದೆ, ನನ್ನ ಸೈಕಲ್ ಸಂಚಾರ! ಎಲ್ಲಿಯಾದರೂ ಅದನ್ನು ಇಡುವುದೆಂದರೆ ನನಗೆ ಭಯ! ಯಾರಾದರೂ ಅದನ್ನೆತ್ತಿಕೊಂಡು ಹೋಗುವರೋ ಎಂಬ ಶಂಕೆ!!

ಬಹಳ ದಿನಗಳ ತನಕ—ಅಲ್ಲ—ತಿಂಗಳುಗಳ ತನಕ ನನ್ನ ಪಾಡು ಈ ರೀತಿ ನಡೆಯಿತು. ಮನುಷ್ಯನ ಪ್ರಕೃತಿಯೇ ಹಾಗೆನ್ನಿ—ಇಚ್ಛಿತ ವಸ್ತುವು ದೊರೆಯುವ ತನಕ ಹಂಬಲ—ದೊರೆತೊಡನೆ ಅದರ ಮೇಲೆ ಎಣೆಯಿಲ್ಲದ ಕ್ಷಣಿಕ ಪ್ರೇಮ. ಆದರೆ ಅದು ಲಭ್ಯವಾಗಿ ಕೆಲವು ದಿನಗಳು ದಾಟಿದುವೆಂದರೆ, ತನ್ನ ಮೊದಲಿನ ಪ್ರೇಮೋತ್ಸಾಹವೆಲ್ಲ ಮಾಯವಾಗಿ ಬಿಡುವುದು. ಕೊನೆಗೆ ವಸ್ತು ಸಂಪಾದನೆಯಾದ ತನ್ನ ವಿಜಯೋತ್ಸವದ ನೆನಪೇ ಇರುವುದಿಲ್ಲ.

ನನ್ನ ಸೈಕಲಿನ ಮಟ್ಟಿಗೆ ನನಗೂ ಹಾಗೆಯೇ ಆಯಿತು. ಅದು ನನ್ನ ಕೈಗೆ ಬಂದೊಡನೆ ಅದರ ಮೇಲೆ ಅಪ್ರತಿಮ ಪ್ರೇಮವನ್ನು ತೋರಿಸಿದ್ದೆನೆಂದೆನಷ್ಟೆ. ಆದರೆ ಮತ್ತಿನ ನನ್ನ ಅವಸ್ಥೆ ಕೇಳಿ. ನನ್ನ ಸೈಕಲು ಹಳೇದಾಗುತ್ತಾ ಬಂತು. (ಯಾಕೋ ತಿಳಿಯದು). ಅದರೊಡನೆ ನನಗೆ ಅದರ ಮೇಲೆ ಮೊದಲಿದ್ದ ಲಕ್ಷ್ಯವೂ ಕಡಿಮೆಯಾಗುತ್ತಾ ಬಂತು. ಇಟ್ಟಲ್ಲಿಂದ ಅದನ್ನು ಯಾರಾದರೂ ಎತ್ತಿಕೊಂಡು ಹೋಗುವರೊ ಎಂಬ ಆ ಸಂಶಯವೂ ನನ್ನ ಮನಸ್ಸಿನಿಂದ ಹೋಯಿತು. ಮತ್ತೂ ಕೆಲವು ದಿನಗಳು ಕಳೆದುವು. ನಾನು ನನ್ನ ಸೈಕಲನ್ನು ಮೂಸಿ ಕೂಡಾ ನೋಡಿದ್ದಿಲ್ಲ.

ಎಷ್ಟರ ತನಕ ನಾನು ಅದನ್ನು ಜತನದಿಂದಿಟ್ಟದ್ದೆನೋ, ಅಷ್ಟರ ತನಕ ಅದೂ ಚೆನ್ನಾಗಿತ್ತು — ಮಿಂಚುತಿತ್ತು. ನೋಡುವುದಕ್ಕೆ ಮನೋಹರವಾಗಿತ್ತು. ಆದರೆ ನನ್ನ ಲಕ್ಷ್ಯವು ಕಡಿಮೆಯಾದ ಹಾಗೆ, ಅದರ ರೂಪವೂ ಕೆಟ್ಟಿತು. ಅದಕ್ಕೆ ಮಬ್ಬು ಹಿಡಿಯಿತು. ಅದನ್ನು ಮೂಲೆಯಲ್ಲಿ ಇರಿಸಿದ್ದೆ.

ಒಂದು ದಿನ ಮಧ್ಯಾಹ್ನ ನಮ್ಮ ಮನೆಯ ಜಗಲಿಯ ಮೇಲಿದ್ದ ಆ ಸೈಕಲು ಕಾಣೆ!!! ನನ್ನ ಒಬ್ಬ ಮಿತ್ರನು ಮನೆಗೆ ಬಂದಿದ್ದನಂತೆ. ಹೇಳದೆ ಕೇಳದೆ ಅದನ್ನು ಕೊಂಡೊಯ್ದನಂತೆ. (ಅವನಾಗಿ ಕೊಂಡೊಯ್ದನೋ ಅದಾಗಿ ಹೋಯಿತೋ ಯಾರು ಬಲ್ಲ?) ಮಧ್ಯಾಹ್ನದಲ್ಲಿ ಊಟಕ್ಕೆ ಮುಖ ಕಪ್ಪು ಮಾಡಿಕೊಂಡು, ಹೊಟ್ಟೆ ಕಟ್ಟಿಕೊಂಡು ಬರುವಾಗ ನನ್ನ ಕಿವಿಯೊಳಗೆ ಈ ಘೋರ ವಾರ್ತೆ!!! ಕೇಳಿ ದಿಗಿಲುಗೊಂಡೆ. ಹಾ ನನ್ನ ಸೈಕಲ್! ಹೋ ನನ್ನ ಸೈಕಲ್!! ಪೋಲೀಸರಿಗೆ ಅರ್ಜಿ ಮಾಡಿದೆ—ಕೊರಗಿದೆ—ಮರುಗಿದೆ—ತಿರುಗಿದೆ—ಸೈಕಲ್ ಮಾತ್ರ ಕಾಣೆ—ಹೋದ ಅದು ಹೋಯಿತೆ! ಹಾ ನನ್ನ ಸೈಕಲಿನ ರೂಪವೇ! ಅದರ "ಸ್ಪೀಡ್" ಎಷ್ಟು!!

ಅದು ಕಳೆದು ಹೋದ ಮೇಲೆ ನನಗೆ ಅದರ ಉತ್ತಮತೆಯು ತಿಳಿದುಬಂತು. [illegible] ಕೈಯಲ್ಲಿರುವಾಗ ಅದರ ಪ್ರಶಂಸನೀಯ ಗುಣಗಳು ತಿಳಿದುಬರು[illegible] ಜಾಗ್ರತೆಯುಂಟಾಗುವುದಿಲ್ಲ. ಅದು ಕೈಯಿಂದ ಹೋಗಿ [illegible]

ಕಪ್ಪು ಬಣ್ಣ ಹುಟ್ಟಿನಾದ ಕೆಮ್ಮಣ್ಣನ್ನು ಪುಡಿಮಾಡಿ ಸರ್ವಾಂಗಕ್ಕೂ ಲೇಪಮಾಡಿಕ್ಕೊಂಡು ತಣ್ಣೀರಿನಲ್ಲಿ ಸ್ನಾನ ಮಾಡುತ್ತಾ [illegible] ಕಳೆಗಳು ಗುಣವಾಗಿ [illegible] ಹೊಂಬಣ್ಣವು ಬರುತ್ತದೆ.

ಆಹಾ ದೇವಣ್ಣ! ನಿನ್ನ ಗತಿಯೇ!!

ಲೇಖಕರು:—ಶ್ರೀ ಬಿ. ವೇಣುಗೋಪಾಲ ಸುವರ್ಣ.

(ಸ್ವಕಪೋಲಕಲ್ಪಿತ.)

ಬೆಳಿಗ್ಗೆ ಸಾಧಾರಣ ಹನ್ನೊಂದು ಘಂಟೆಯ ಸಮಯ ಇರಬಹುದು. ಟಪ್ಪಾಲು ಪೇದೆಯು ಮಂಗಳೂರು ಮೈದಾನು ರೋಡಿನ ಬಳಿ ಒಂದು ಮನೆಯ ಮಾಳಿಗೆಯನ್ನು ಹತ್ತಿ, ಮೇಲೆ ಒಂದು ಕೋಣೆಯಲ್ಲಿದ್ದ ಮಿಸ್ಟರ್ ದೇವಣ್ಣನಿಗೊಂದು ಲಕ್ಕೋಟೆಯನ್ನು ಕೊಟ್ಟನು. ಅದರ ಕವರನ್ನು ತಟ್ಟನೆ ಹರಿದು ದೇವಣ್ಣನು ಕಾಗದವನ್ನು ಓದಲುಪಕ್ರಮಿಸಿದನು. ಓದುತ್ತಾ, ಓದುತ್ತಾ ಅವನ ಮುಖಲಕ್ಷಣವು ವಿಲಕ್ಷಣಗೊಂಡಿತು. ಆಶಾನಿರಾಶನಾದಂತೆ ಕಂಡಿತು. ಸ್ವಲ್ಪ ಹೊತ್ತು ಯೋಚಿಸಿದ; ಒಡನೆ ಏನೋ ಒಂದು ವಿಷಯವು ಸ್ಮರಣೆಗೆ ಬಂದು, ಆ ಪತ್ರವನ್ನು ಚೂರು ಚೂರು ಗೈದು, ಉಡುಪನ್ನುಟ್ಟು ಮಾಳಿಗೆಯಿಂದ ಬಡಬಡನೆ ಕೆಳಗಿಳಿದು ಎತ್ತಲೋ ನಡೆದ.

ವಾಚಕವೃಂದ! ಇವನಿಗೆ ಈ ಪತ್ರವನ್ನು ಇವನ ತಂದೆಯವರಾದ ಸುಬ್ಬ ಭಟ್ಟರು ಮೂಲ್ಕಿಯಿಂದ ರವಾನಿಸಿದ್ದರು. ಪ್ರೌಢ ವಿದ್ಯಾರ್ಜನೆಗಾಗಿ ಅವರು ದೇವಣ್ಣನನ್ನು ಮಂಗಳೂರಿಗೆ ಕಳುಹಿದ್ದರು. ತಂದೆಯಂತೆ ಮಗ – ವಿದ್ಯೆಯಲ್ಲೂ, ಬುದ್ಧಿಯಲ್ಲೂ, ಗುಣನಡತೆಯಲ್ಲೂ ಹೆಸರು ಗಳಿಸಿಕೊಂಡ. ಭಟ್ಟರಿಗೆ ತನ್ನ ಮಗನ ಮೇಲೆ ಬಹು ಮಮತೆ. ಅವನು ತನ್ನಂತೆ ಒಬ್ಬ "ಗ್ರಹಸ್ಥ"ನಾಗಬೇಕೆಂದು ಅವರ ನಿತ್ಯದ ಹಂಬಲ. ಮಗನು ಬಿ. ಎ. ಕ್ಲಾಸಿನಲ್ಲಿ ತೇರ್ಗಡೆ ಹೊಂದಿದ ನಂತರವಂತೂ ಅವರಿಗೆ ಮಹದಾನಂದ.

ಒಂದು ದಿನ ಸುಬ್ಬ ಭಟ್ಟರಿಗೆ ಮೂಲ್ಕಿಗೆ ಒಂದು "ತಳ್ಳಿ" ಅರ್ಜಿಯು ತಲಪಿತು. ಅದರಲ್ಲಿ ದೇವಣ್ಣನ ಪ್ರಕೃತದ ಗುಣನಡತೆಯನ್ನು ಬಣ್ಣಿಸಲಾಗಿತ್ತು. ಸುಬ್ಬ ಭಟ್ಟರಿಗೆ ಲೋಕವೇ ಕಾಣದು!

ನಾರಾಯಣನು ಮಾಳಿಗೆಯಿಂದಿಳಿದವನೇ ನೆಟ್ಟಗೆ ಅತ್ತಾವರಕ್ಕೆ ನಡೆದ. ಅಲ್ಲಿ 'ವೈಟ್‌ವಾಶ್' ಮಾಡಿದ್ದ ಒಂದು ದೊಡ್ಡ ಮನೆಯನ್ನು ಹೊಕ್ಕನು. ಜಗಲಿಯಲ್ಲಿ ಒಬ್ಬ ಮುದುಕಿಯು ಕುರ್ಚಿಯ ಮೇಲೆ ಕುಳಿತಿದ್ದಳು.

ದೇವಣ್ಣ—"ಚಾರ್ಲಿ ಇಲ್ಲವೇನು?"

ಮುದುಕಿ—"ಇಲ್ಲ, ನಿನ್ನೆ ತಂದೆಯು ಬಳಿಗೆ ಚಿಕ್ಕಮಗಳೂರಿಗೆ ಹೋಗಿರುವನು.

ಅದನ್ನು ಕೇಳಿ ದೇವಣ್ಣನು ಅಸಮಾಧಾನಗೊಂಡು ನೆಟ್ಟಗೆ ಒಳಗೆ ಹೋದನು. ಅಲ್ಲಿ ಒಬ್ಬ ತರುಣಿಯು ಕುರ್ಚಿಯ ಮೇಲೆ ಕುಳಿತು ಕಸೂತಿ ಕೆಲಸದಲ್ಲಿ ತೊಡಗಿದ್ದಳು. ದೇವಣ್ಣನು ಒಳ ಹೊಕ್ಕೊಡನೆ ಅವಳು ಎದ್ದು ನಿಂತಳು.

ದೇವಣ್ಣ—"ಪ್ರಿಯೆ, ನೋಡಿದೆಯಾ ಅವಸ್ಥೆ! ನನ್ನ ತಂದೆಯವರ ಕಾಗದವು ಪುನಃ ಬಂದಿದೆ. ನಾನು ನಿಮ್ಮಲ್ಲಿರುವುದಕ್ಕಾಗಿ ಬಹಳ ರೇಗಿ ಬರೆದಿರುವರು."

ತರುಣಿ—"ಅದಕ್ಕೇಕೆ ಗಾಬರಿ?"

ದೇವಣ್ಣ—'ಗಾಬರಿಯೇನಿಲ್ಲ—ನಾನು ನಿನ್ನನ್ನು ಮದುವೆಯಾದರೆ ನನ್ನ ಶ್ರಾದ್ಧಾದಿ ಎಲ್ಲಾ ಕೆಲಸಗಳನ್ನು ನಾಡದು ಆದಿತ್ಯವಾರ ತೀರಿಸಿ, ನನ್ನನ್ನು ಸತ್ತವರ ಪಾಲಿಗಿಡುವರಂತೆ. ನನ್ನಿಂದಾಗಿ ಒಬ್ಬನೇ ಮಗನಾದ ನನ್ನ ಮೇಲೆ ನನ್ನ ತಂದೆಗಿದ್ದ ಅಪ್ರತಿಹತ ಪ್ರೇಮವು ಕರಗುವಂತಾಯಿತು. ನಾನು ಯಾವುದಕ್ಕೂ, ಯಾರಿಗೂ ಬೇಡದವನಂತಾದೆ!'

ತರುಣಿಯು ಕೋಪಗೊಂಡಳು. ತಿರಸ್ಕಾರದ ಮುಖಭಾವದಿಂದ ದೇವಣ್ಣನನ್ನು ಒಂದು ನಿಮಿಷ ಕಂಡು, ನೆಟ್ಟಗೆ ನಡೆದು ಬಿಟ್ಟಳು.

ಮರುದಿನ ಮುಂಜಾನೆ ಸುಬ್ಬ ಭಟ್ಟರು ಮೋಟರ್ ಮೂಲಕ ಮಂಗಳೂರಿಗೆ ಬಂದು, ದೇವಣ್ಣನ ಮಾಳಿಗೆಗೆ ಹೋಗಿ, ಅವನ ಮೇಲೆ ಮೊದಲು ಬೈಗಳ ಸುರಿಮಳೆಯನ್ನು ಕರೆದರು. ಆದರೆ ದೇವಣ್ಣನ ಪ್ರೇಮಭರವು ಕಡಿಮೆಯಾಗಿದ್ದಿಲ್ಲ. ಅವನು ಬಗ್ಗಲಾರದಾದ. ತಂದೆಗೆಂತು ಬಗ್ಗುವನು? ಕೊನೆಗೆ ತಂದೆಯೇ ಬಗ್ಗಿಕೊಂಡರು. "ಮಗಾ ನಿನಗೆ ಕ್ರೈಸ್ತರ ಹುಡುಗಿಯೊಡನೆ "ಬಿಟ್ರೋದಲ್" ನಡೆದಿದೆಯಾಗಿ ತಿಳಿದಿದೆ. ಆದರೂ ಚಿಂತಿಲ್ಲ. ಮುಲ್ಕಿಗೆ ಹೋಗೋಣ. ಅಲ್ಲಿ ನಿನಗೆ ೮೦೦೦ ರೂಪಾಯಿ ವರದಕ್ಷಿಣೆಯನ್ನೂ ಸುಂದರಿಯಾದ ಹೆಣ್ಣನ್ನೂ ಸಂಪಾದಿಸೋಣ" ಎಂದರು. ಆದರೆ ದೇವಣ್ಣನ ಎದೆ ಕಲ್ಲು ಕಟ್ಟಿತ್ತು. ಭಟ್ಟರು ನಿರಾಶೆಗೊಂಡು ಹಿಂತಿರುಗಿದರು.

ಮತ್ತೊಂದು ದಿನ ಆದಿತ್ಯವಾರ ಅತ್ತಾವರದ ಫೆರ್ನಾಂದಿಸ್ (ಫೊಬುರ್) ಪ್ರಭುಗಳ ಮನೆಯಲ್ಲಿ ಮಹಾ ಕೋಲಾಹಲ. ಮಿಸ್ಟರ್ ದೇವಣ್ಣ (ಈಗ ಪೇದ್ರು ಕೈತಾನ್) ಎಂಬ ಯುವಕನಿಗೂ ಶ್ರೀಮತಿ ಎ. ಪಿ. ಕತ್ರೀನಾ ಎಂಬ ಯುವತಿಗೂ ವಿವಾಹ. ಪಾದ್ರಿ ಸಾಹೇಬರು ಸಂತೋಷದಿಂದ ವಿವಾಹವನ್ನು ಮಾಡಿದರು.

ಪೇದ್ರುಗೆ ಮದುವೆಯಾಗಿ ಐದು ತಿಂಗಳು ದಾಟಿದುವು. ತನ್ಮಧ್ಯೆ ಅವನಿಗೊಂದು ಹೆಣ್ಣು ಮಗು ಜನಿಸಿತು. ಕಷ್ಟದ ಮೇಲೆ ಕಷ್ಟ!

ಬಿ. ಎ. ಪಾಸಾಗಿದ್ದನಾದರೂ ಅವನಿಗೆ ಕೆಲಸವೆಲ್ಲೂ ದೊರೆಯಲಿಲ್ಲ. ಆಫೀಸಾಫೀಸು ತಿರುಗಿದ. ಉದ್ಯೋಗ ಲಭ್ಯವಾಗಲಿಲ್ಲ—ಹೇಗಾದೀತು? ಸುಬ್ಬಭಟ್ಟರ ಮಗನೆಂದು ಖ್ಯಾತನಾದ ಇವನು ಕ್ರೈಸ್ತಮತಕ್ಕೆ ಸೇರಿ ವಿವಾಹವಾದ ಸಂಗತಿಯು ಕ್ಲಾರ್ಕರಿಂದ ಮೊದಲಾಗಿ ಮೇಲಧಿಕಾರಿಗಳಿಗೂ ತಿಳಿದಿದ್ದಿತು.

ಪೇದ್ರುವು ಮನೆಯಲ್ಲಿ ಕುಳಿತು ಮೂರು ಹೊತ್ತೂ ಧರ್ಮಕ್ಕೆ ಉಣ್ಣುವುದನ್ನು ನೋಡಿ ಅತ್ತೆಗೂ, ಕ್ರಮೇಣ ಹೆಂಡತಿಗೂ ಸಹಿಸಲದಳವಾಯಿತು. ಗುಣುಗುಟ್ಟುತ್ತಿದ್ದರು – ಅವನನ್ನು ನಿರ್ಲಕ್ಷ್ಯದಿಂದ ಕಾಣುತ್ತಿದ್ದರು. ಆದರೆ ಪೇದ್ರು ಏನುಮಾಡುವನು. ನಾಯಿಯ ಸ್ಥಿತಿಗೆ ಬಂದಿದ್ದುದರಿಂದ ಎಲ್ಲವನ್ನೂ ಅನುಭವಿಸಿದನು.

ಶ್ರೀಗಂಧವನ್ನು ನೀರಿನಲ್ಲಿ ತೇದು ನೆತ್ತಿಗೆ ಲೇಪಮಾಡುತ್ತಾ ಇದ್ದರೆ ನೆತ್ತಿ ಉರಿ, ಉಷ್ಣದ ಬೊಕ್ಕೆಗಳು ಸಮಾಧಾನವಾಗುತ್ತವೆ,

ಗಂಡನ ಅವಸ್ಥೆಯನ್ನು ಕಂಡು ಕತ್ರಿನಳಿಗೆ ಬೇಸರಬಂತು. ಒಂದು ದಿನ ಪೇದ್ರುವು ಸಮೀಪಿಸಿದೊಡನೆ ಕಣ್ಣುಗಳನ್ನು ಕೆಂಪಡರಿಸಿ ರಾಕ್ಷಸಿಯು ಮುಗಳಂತೆ ಹಲ್ಲು ಕಚ್ಚಿ (ಪುಣ್ಯಕ್ಕೆ ಕಸಬರಿಕೆಯನ್ನು ಹಿಡಿದುಕೊಳ್ಳಲಿಲ್ಲ) ಪೇದ್ರುವಿನ ಮೇಲೆ ಲಟಲಟವೆಂದು ಬೈಗಳ ಮೇಲೆ ಬೈಗಳ ಪೆಟ್ಟನ್ನು ಕರೆದಳು. "ಬೊಡ್ಕಿಚೆ ಪುತಾ! ವಸ್. ಕಾಮ್ ನಾ, ಕಾಸ್ ನಾ, ವಸ್, ಬ್ಯಾರ್ ವಸ್!!" ಎಂದು 'ಗರಂ' ಮಾಡಿಬಿಟ್ಟಳು.

ಪೇದ್ರುವು ಒಡನೆ ಹೊರಹೊರಟನು. ಉದ್ಯೋಗವನ್ನು ಸಂಪಾದಿಸದೆ ತಾನಿಲ್ಲಿಗೆ ಬರಲಾರೆನೆಂದು ದೃಢೀಕರಿಸಿಕೊಂಡನು. ಪುನಃ ಆಫೀಸು ಆಫೀಸು, ಅಂಗಡಿ ಅಂಗಡಿ, ತಿರುಗಿ ಕೆಲಸವನ್ನು ಹುಡುಕಿದನು. ಅದು ಸಿಗಲಿಲ್ಲ. ಅವನಿಗೆ ಪ್ರಾಣವೇ ಭಾರವೆಂದೆಣಿಸಿತು. ತಂದೆಯು ಶಾಪವು ತಟ್ಟಿದೆಂದು ನೆನೆದನು.

\+ \+ \+ \+

ಜುಲಾಯಿ ತಿಂಗಳು. ಬೆಳಿಗ್ಗೆ ಹತ್ತು ಘಂಟೆಯ ಸಮಯವಾಗಿರಬಹುದು. ಹಂಪನ್‌ಕಟ್ಟೆಯ "ಪಬ್ಲಿಕ್" ಬಾವಿಯಲ್ಲಿ ಸುತ್ತಲೂ ಸಾವಿರಾರು ಜನರು ನಿಂತಿದ್ದಾರೆ. ಇಬ್ಬರು ಬಾವಿಯೊಳಗಿಳಿದು ಒಂದು ಶವವನ್ನು ಮೇಲೆತ್ತೆಗೆಯುತ್ತಾರೆ. ಒಬ್ಬ ಭಟ್ಟರು ಗೋಳೋ ಮುರ್ರ್ಯೋ ಎಂದು ಕೂಗುತ್ತಿದ್ದಾರೆ. ಶವವನ್ನು ಮೇಲೆತ್ತೆಗೆದರು. ವಾಚಕರೇ ಅದ್ಯಾರದೆಂದು ತಿಳಿಯಿತಲ್ಲವೇ?

ಸಂಜೆ ನಾಲ್ಕು ಘಂಟೆ ಸಮಯ: ದೇವಣ್ಣ ಯಾನೆ ಪೇದ್ರುವು ಕ್ರೈಸ್ತ ಬಾಂಧವರ ಹೆಗಲ ಮೇಲೆ ಮರಣ ಪೆಟ್ಟಿಗೆಯಲ್ಲಿ ಕಣ್ಮುಚ್ಚಿ ಮಲಗಿದ್ದಾನೆ. ಶವವು ಇಗರ್ಜಿಯ ಸ್ಮಶಾನಭೂಮಿಯತ್ತಕಡೆ ಹೋಗುತ್ತದೆ. ಪಾದ್ರಿಗಳ ಆಶೀರ್ವಾದಗಳನ್ನು ಯಾರ ಅಡ್ಡಿಯಿಲ್ಲದೆಯೇ ಕೇಳಿ ಸ್ವರ್ಗಕ್ಕಡರಬೇಕೆಂದು ಪೇದ್ರುವು ಕರ್ರನೆ ಕಣ್ಮುಚ್ಚಿದ್ದಾನೆ.

ಆಹಾ! ದೇವಣ್ಣ ನಿನ್ನ ಗತಿಯೇ! ನಿನಗೆ ಸಿಕ್ಕಿದ ಫಲವಾದರೂ ಏನು? ಕ್ಷಣಿಕ ಸುಖ-ಐದು ತಿಂಗಳೊಳಗೊಂದು ಸಣ್ಣ ಮಗು-ಕುತ್ತಿಗೆಗೆ ಹಗ್ಗದಿಂದ ಜೋತಾಡುವ ಒಂದು ಪವಿತ್ರ "ಕ್ರೂಜೆ". ಇನ್ನು 'ಪೇದ್ರುಪೊರ್ಬು' ಎಂಬ ಪುಣ್ಯ ಹೆಸರು. ಪರಮತಾವಲಂಬಿಗಳಾಗಿ, ಧರ್ಮವನ್ನು ಮರೆತು ಮೆರೆಯುವವರಿಗೆ ನೀನೊಂದು ಉದಾರಣೆಯಾದೆ! ನಿನ್ನ ಆತ್ಮಕ್ಕೆ ಶಾಂತಿಯಿರಲಿ!

ಪತ್ರವ್ಯವಹಾರ.

[ಬಡವರಿಗೆ ಸಂಬಂಧಪಟ್ಟ ಚಿಕ್ಕ ಚಿಕ್ಕ ಪತ್ರವ್ಯವಹಾರಗಳನ್ನು ಪ್ರಕಟಿಸುವೆವು. ಲೇಖಕರ ಅಭಿಪ್ರಾಯಗಳಿಗೆ ಸಂಪಾದಕರು ಜವಾಬ್ದಾರರಲ್ಲ. ಸಂ. ಬ. ಬ.]

A TEACHER'S COMPLAINT.

ಒಬ್ಬ ಬಡ ಉಪಾಧ್ಯಾಯನ ದೂರು.

ಅಯ್ಯಾ ಬಡವರ ಬಂಧುವೇ,

ನನ್ನ ಬಡತನದ ಗೋಳನ್ನು ಕೇಳುವಿಯಾ? ನೀನೊಬ್ಬ ಜನಿಸಿದ್ದು ಈ ಕಾಲದಲ್ಲಿ ನಮ್ಮ ಭಾಗ್ಯೋದಯವೆಂದೇ ಹೇಳಬೇಕು. ನೀನು ಚಿರಾಯುವಾಗುವಂತೆ ಶ್ರೀ ದೇವರನ್ನು ಪ್ರಾರ್ಥಿಸುತ್ತೇನೆ.

ನಾನೊಬ್ಬ ಬಡ ಉಪಾಧ್ಯಾಯ. ಒಂದು ಶಾಲೆಯಲ್ಲಿ ಚಿಕ್ಕ ಮಾಸ್ತರ್. ತಿಂಗಳಿಗೆ ಏಳು ರೂಪಾಯಿ ಸಂಬಳ ಕೊಡುವೆನೆಂದು ಮೆನೇಜರರು ಮೊದಲೇ ಹೇಳಿದ್ದರು. ಆ ಧೈರ್ಯದಿಂದ ಕೆಲವು ತಿಂಗಳುಗಳ ತನಕ ಶಾಲೆ ಕಲಿಸಿದೆ. ಆದರೆ ಸಂಬಳ ಸಿಗಲಿಲ್ಲ. ಕಾಫಿಗೆ ಕಾಸು ಸಿಕ್ಕಿತು. ಅದಕ್ಕೂ ಕೂಡಾ ಮೆನೇಜರರ ಬೆನ್ನು ಹಿಡಿದು ತಿರುಗಾಡಬೇಕು. ಬಿಟ್ಟಿ ಕೆಲಸ ಮಾಡಬೇಕು. ಶಾಲಾ ಪರೀಕ್ಷೆಯ ಸಮಯವು ಬಂತು. ಇನ್ಸ್‌ಪೆಕ್ಟರರಿಗೆ ಶಾಲೆಯ ಲೆಖ್ಖ ಹಾಜರಿ ಸರಿಪಡಿಸಬೇಕು. ಉಪಾಧ್ಯಾಯರಿಗೆ ಸಂಬಳ ಕೊಟ್ಟದ್ದನ್ನು ಅವರಿಗೆ ಕಾಣಿಸಬೇಕು. ಕಾಣಿಸಬೇಕಾದರೆ ಸಂಬಳ ಪಡೆದ ಉಪಾಧ್ಯಾಯರ ಸಹಿ ಇರಬೇಕು. ನನಗೆ ಸಂಬಳ ದೊರೆಯಲಿಲ್ಲವೆಂದು ಮೊದಲೇ ಹೇಳಿದೆ. ಆದರೆ ಅದು ಹಿಂದಿನಿಂದ ಸಿಗಬಹುದೆಂದು ನೆನಸಿ, ದಸ್ಕತು ಹಾಕಿದೆ. ಮೆನೇಜರರ ಮರ್ಯಾದೆ ಉಳಿಸಿದೆ. ಪಟ್ಟಿಯನ್ನು ಇನ್ಸ್‌ಪೆಕ್ಟರರಿಗೆ ತೋರಿಸಲಾಯಿತು. ಕೆಲವರು ಕೇಳಿದರು "ಸಂಬಳ ಸಿಕ್ಕಿತಲ್ಲ?" ಎಂದು. "ಹೌದೆ"ಂದೆನು. ಮೆನೇಜರರ ನಿರ್ಬಂಧ; ಬರುವ ಸಂಳವೂ ಹೋದಿತೆಂದು ಅಂಜಿಕೆ. ಅನೇಕ ದಿನಗಳು ಕಳೆದರೂ ಸಂಬಳ ದೊರೆಯಲಿಲ್ಲ. ಒಂದೆರಡು ರೂಪಾಯಿಗಳನ್ನು ಮಾರ್ಗದ ಮೇಲೆ ತೋರಿಸಿ "ಬೇಕಾದರೆ ಇದನ್ನು ತೆಗೆದುಕೊಳ್ಳಿ ಇಲ್ಲದಿದ್ದರೆ ಬಿಡಿ! ವ್ಯಾಜ್ಯ ಮಾಡಿ!" ಎನ್ನುವರು ಮೆನೇಜರರು. ಗ್ರೇಂಟು ಕಡಿಮೆಯಾಗಿದೆಯೆಂದೇ ಅವರ ನೆವನ. ಇನ್ನೊಬ್ಬ ಉಪಾಧ್ಯಾಯರನ್ನು ಈ ಮೆನೇಜರರು ಮೂರು ತಿಂಗಳ ಕೆಲಸದಲ್ಲಿ ದಣಿಸಿ ಅವರಿಗೆ ತಿಂಗಳಿಗೆ ರೂಪಾಯಿ ಎಂಟರಂತೆ ಸಂಬಳ ಕೊಡುವೆನೆಂದಿದ್ದರು. ಕೆಲವು ತಿಂಗಳು ದಾಟಿದ ಮೇಲೆ ಬರೇ ಆರು ರೂಪಾಯಿಗಳನ್ನು ಕೊಟ್ಟರು. ಇವರ ಮೇಲೆ ವ್ಯಾಜ್ಯವನ್ನು ಹೂಡಲು ಕಾಸಿಲ್ಲ. ಸಂಬಳ ಕಡಿಮೆಯಾದರೆ ವ್ಯಾಜ್ಯ ಮಾಡಬೇಕೆಂದು ಅವರಿಗೂ ಹೇಳಿದರು. ಪಾಪದ ಉಪಾಧ್ಯಾಯರನ್ನು ಅಧಿಕಾರಿಗಳು ಹೀಗೆ ಬಳಲಿಸಿದರೆ ಹೇಗೆ ನೀನೆ ಹೇಳು!

ಇತಿ,

ಬಡ ಉಪಾಧ್ಯಾಯ.

[ಇಂತಹ ಅಧಿಕಾರಿಗಳಿಗೂ, ಶಾಲೆಗೂ ಬಾಳಿಕೆಯಿಲ್ಲವೆಂದು ಖಂಡಿತವಾಗಿ ತಿಳಿಯಿರಿ. ಸಂ. ಬ. ಬ.]

ಸ್ವೀಕಾರವಿಮರ್ಶೆ.

ಮಂಗಳೂರಿನ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ಪಂಚಮ ಪುಷ್ಪವಾಗಿ ಹೆಸರುವಾಸಿ ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿ ಇವರಿಂದ ಅನುವಾದಿಸಲ್ಪಟ್ಟು ಪ್ರಕಾಶಿತವಾದ "ಕಲಿಯುಗ"ವೆಂಬ ಚಿಕ್ಕ ವಹಿಯು ನಮ್ಮ ಹಸ್ತಗತವಾಗಿದೆ. ಇದರ ಬೆಲೆ ಬರೇ ೯ ಪೈ ಕಲಿಯುಗದ ನೆವವನ್ನು ಮುಂದಿಡುತ್ತಾ, ತಮ್ಮ ಕರ್ಮಗಳನ್ನು ಮರೆತು ಮೆರೆಯುತ್ತಾ ಅನ್ಯಾಯವನ್ನೆಸಗುತ್ತಿರುವುದು ದ್ರೋಹಕರವೆಂದು ಈ ಪುಸ್ತಕವು ಬೋಧಿಸುವಂತಹದಿದೆ. ಜ್ಞಾನಾರ್ಜನೆಯಾಗಬೇಕೆಂದಿದ್ದ ಪ್ರತಿ ಕನ್ನಡಿಗನೂ ಇದನ್ನು ಸನ್ಯಾಸಿಗುಡ್ಡೆಯ ಆರ್ಯಸಮಾಜದಿಂದ ತರಿಸಿಕೊಳ್ಳಬಹುದು.

ತರುಣ ಕವಿಗಳಾಗಿ, ಕನ್ನಡ ಸಾಹಿತ್ಯ ಸೇವೆಯಲ್ಲಿ ನಿರತರಾಗಿರುವ ಮಿತ್ರ ಮಂಡಳಿಯ ಶ್ರೀ ಕಾಪು ಮಂಜುನಾಥ ಶೆಣೈಯವರಿಂದ ಪ್ರಕಟವಾದ 'ಮುರಲಿ' ಎಂಬ ಎರಡಾಣೆ ಬೆಲೆಯ ಪದ್ಯ ಪುಸ್ತಕವೊಂದು ಹಸ್ತಗತವಾಗಿದೆ. ಇದರಲ್ಲಿ ೧೫ ಉತ್ತಮ ಪದ್ಯಗಳಿವೆ. ಇವರ ಸರಸ್ವತೀ ಗ್ರಂಥಹಾರದಲ್ಲಿ ತುಂಬಾ ಪುಸ್ತಕಮಣಿಗಳಾಗಲೆಂದು ಹಾರೈಕೆ. ತರುಣ ಕವಿಹೃದಯವನ್ನರಿಯಬೇಕೆಂದಿರುವವರೆಲ್ಲರೂ ಈ ಪುಸ್ತಕವನ್ನು ಕಾಪು, ದ. ಕ. ಇಲ್ಲಿಗೆ ಲೇಖಕರಿಗೆ ೨॥ ಆಣೆ ಅಂಚೆ ಚೀಟು ರವಾನಿಸಿ ತರಿಸಿಕೊಳ್ಳಬಹುದು.

ಶ್ರೀಮತಿ 'ಜೈನ ಮಹಿಳೆ' ಎಂಬ ಕಬ್ಬಿಗತಿಯವರಿಂದ ಬರೆಯಲ್ಪಟ್ಟು ಶ್ರೀಮತಿ ಪಣಪಿಲ ಅರಮನೆ ದೇಜಮ್ಮನವರಿಂದ ಪ್ರಕಾಶಿಸಲ್ಪಟ್ಟ ಲಕ್ಷ್ಮೀ ಬಾಯಿ ಎಂಬ ಪದ್ಯ ಪುಸ್ತಕವು ಶ್ರೀ ಗೋವಿಂದ ಪೈಯವರ ಮುನ್ನುಡಿ ಸಹಿತ ಹೊರಬಿದ್ದಿದೆ. "ಬರಿಯ ಚೆಲ್ವಿಕೆಗೆ ಬಿನ್ನಣಕೆ ಬೆಡಗಿಗೆ ಸೋತು ಮರುಳಾಗಿ ಕಪಟ ಪ್ರೇಮವನ್ನೆಚ್ಚಿ ಜನರು ಪರಸತಿಯನಾಶಿಸದೆ ತಂತಮ್ಮ ಕೈವಿಡಿದವರ ಪತ್ನಿಯರ ಕೂಡಿ ಸುಖಮಿರಲಿ ಸತತ" ಎಂಬ ಬುದ್ಧಿವಾದವನ್ನು ಕೊಡುವ ಗಂಡಹೆಂಡರಿಬ್ಬರ ಕಥೆಯು ಇದರಲ್ಲಿ ಚಿತ್ರಿತವಾಗಿದೆ. ಬಲು ಸೊಗಸಾದ ಕವಿತೆ. ಶ್ರೀ ಎನ್. ಎಸ್. ಜೈನಿ, ಪೋಸ್ಟ್ ನೆಲ್ಲಿಕಾರ್, ಕಾರ್ಕಳ, ಇವರಿಗೆ ಒಂದಾಣೆ ಅಂಚೆ ಚೀಟನ್ನು ರವಾನಿಸಿದರೆ ಪುಸ್ತಕವು ಧರ್ಮಾರ್ಥವಾಗಿ ಸಿಗುವುದು.

ವಿದ್ಯಾರ್ಥಿಯ ಕನಸು.

ಲೇಖಕರು:—ಶ್ರೀ ಕೊಚ್ಚಿಕಾರ ಗೋಪಾಲಕೃಷ್ಣ ಪೈ.

ಅಯ್ಯೋ! ಎಂತಹ ದುರ್ಧರವಾದ ಪ್ರಸಂಗವು ತಾನೆ ಬಂದೊದಗಿರುವುದು? ಹಾ! ನಾನೆಲ್ಲಿರುವೆನು? ಸರ್ವವೂ ಅಪಾರವಾದ ವಾರಿರಾಶಿಯಿಂದ ತುಂಬಿ ತುಳುಕಾಡುತ್ತಿರುವುದು. ವಿಲಾಸಿಗಳಿಗೆ ಆಹ್ಲಾದವನ್ನುಂಟುಮಾಡುವ ಈ ಜಲಧಿಯು ನಿರ್ಗತಿಕನಾದ ನನ್ನನ್ನೇಕೆ ಇಷ್ಟು ವಕ್ರತೆಯಿಂದ ಕಾಣುವುದು? ಮಂದಾನಿಲನೆಂದು ಸರ್ವರಿಂದಲೂ ಸ್ತುತಿಸಲ್ಪಟ್ಟ ಈ ಮಾರುತನು ಎಂತಹ ಕಠಿಣ ಹೃದಯನಾಗಿರುವನು? ಸರ್ವವ್ಯಾಪಿಯಾದ ಗಗನಾಂಗಣವಾದರೋ ಕಾರ್ಮೋಡಗಳಿಂದ ಕಿಕ್ಕಿರಿದಿರುವುದು. ಮೋಡಗಳ ತಾಡಣದಿಂದ ಉಂಟಾದ ಮೇಘ ಧ್ವನಿಯು ಕರ್ಣ ಕುಹರವನ್ನು ಹೊಕ್ಕು ಹೃದಯದಲ್ಲಿ ಕಂಪನವನ್ನುಂಟುಮಾಡುತ್ತಿರುವುದು.

ಇತ್ತ ನಾನಾದರೋ ಚಿಕ್ಕದೊಂದು ಹಡಗಿನ ಮೇಲೆ ವಿಶ್ರಮಿಸಿದ್ದೆನು. ಬದುಕುವೆನೆಂಬ ಆಶೆಯು ಲೇಶ ಮಾತ್ರವೂ ಉಳಿಯದೆ ನಾಶವಾಗಿತ್ತು. ನನ್ನನ್ನು ನಂಬಿರುವ ಬಡ ಕುಟುಂಬಿಕರ ನೆನಪು ನನ್ನನ್ನು ಬಾಧಿಸುತ್ತಿದ್ದರೂ, ಏನು ಮಾಡಲೂ ಸಾಧ್ಯವಾಗುತ್ತಿದ್ದಿಲ್ಲ. ಮೃತ್ಯು ದೇವನು ಸರ್ವರನ್ನೂ ಏಕಪ್ರಕಾರವಾಗಿ ಕಾಣುವನೆಂಬುದೇನೋ ನಿಜ. ಆದರೆ ಸಹಾಯ ಶೂನ್ಯನಾದ ನನ್ನನ್ನೇಕೆ ಈಗ ತಾನೇ ಬಯ್ಯಲು ಸಿದ್ಧನಾಗಬೇಕು? ಅಂತೂ ಪ್ರಾಣದ ಪ್ರೀತಿಯನ್ನು ತೊರೆದೇ ಬಿಟ್ಟೆನು.

ಹಡಗಂತೂ ಮುಳುಗುತ್ತಲೇ ಇದ್ದಿತು! ಸಹಾಯದ ಬಯಕೆಯು ಗಗನಾಂತಃಪುರವಾಯಿತು. ಯಮದೂತರಿಗೂ ಬೇಡವೆಂದು ಡಂಭವಾಡುತ್ತಿದ್ದ ನಾನು ಅವರ ನಿರೀಕ್ಷಣೆಯಲ್ಲಿಯೇ ಇದ್ದೆನು. ನಿಮಿಷಾರ್ಧದಲ್ಲಿ ನೀರು ಪಾಲಾಗಿಯೇ ಬಿಟ್ಟೆನು! ನನ್ನ 'ಅಯ್ಯೋ' ಎಂಬ ಆರ್ತಸ್ವರದೊಡನೆ 'ಥಬ್' ಎಂಬ ಸದ್ದೂ ಕೇಳಿಸಿತು....

ಇದೇನು?—ಹತ್ತಿರವಿದ್ದ ಗಾಜಿನ ದೀಪವು ಒಡೆದು ಚೂರ್ಣವಾಗಿತ್ತು. ಪುಸ್ತಕಗಳಂತೂ ಅಸ್ತವ್ಯಸ್ತವಾಗಿ ಬಿದ್ದಿದ್ದುವು. ಹಾ ಇದೇನು?

LIST OF MANUFACTURERS OF GENUINE KHADI.

ಸ್ವದೇಶಿ ಪ್ರಚಾರಕಾರ್ಯವು ಭರದಿಂದ ಸಾಗುತ್ತಿರುವ ಈ ಕಾಲದಲ್ಲಿ ಸಾ... ಜನಿಕರು ಖಾದಿಯೆಂದು ನಕಲಿ ಬಟ್ಟೆಗಳನ್ನು ಮಾರುವವರ ಬಲೆಗೆ ಸಿಲುಕಿಬೀಳುವ... ನಿತ್ಯನೋಟವು. ನಮ್ಮ ಹಣವನ್ನು ನಮ್ಮ ದೇಶದಲ್ಲೇ ಉಳಿಸಿ, ನಮ್ಮ ದೇಶಿ... ಕೈಗಾರಿಕೆಗಳನ್ನುದ್ಧರಿಸಿ ದೇಶಸೇವೆ ಮಾಡಬೇಕೆಂದಿರುವ ವರ್ತಕರೂ, ಜನರೂ ಕೆಳಗಿನ ಪಟ್ಟಿಯಿಂದ ಹೇರಳ ಪ್ರಯೋಜನವನ್ನು ಪಡೆಯದಿರರು. ಕೆಳಗಿನ ಮಂ... ಗಳು ಉತ್ಕೃಷ್ಟವಾದ ಊಲನ್, ಕಾಶ್ಮಿರ್ ಖಾದಿ, ಆಂಧ್ರ ಖಾದಿ, ಮುಸಲೀ... ಮಿನ ಅಚ್ಚಿನ ಬಟ್ಟೆ ಮೊದಲಾದುವುಗಳನ್ನು ಕೈಮಗ್ಗ ಮತ್ತು ಚರಕಗಳಿಂದ ತಂ... ರಿಸುವವರು.

ಕಾಶ್ಮೀರ್.

1. All India Spinner's Association, Kashm... Branch, Srinagar. Kashmir,
2. Kashmir Swadeshi Stores, Srinagar.

ಪಂಜಾಬ್.

3. All India Spinner's Association, Adampu... Doaba Central Stores, Jullundhar Dt. Punjab.
4. Lala Hans Raj Dinanath, Bulala via Bea... Punjab.

ಸಂಯುಕ್ತ ಪ್ರಾಂತ್ಯ.

5. Gandhi Ashram, Meerut.
6. Chiranji Lall Pyare Lall, Apur, Meerut.
7. Suddha Khadi Bandar, Dhampur, Bijno... Dt. Rajastan.
8. All India Spinner's Association, Rajasta... Branch, (ಶರ್ಟಿಂಗ್ ವಸ್ತ್ರ ಮತ್ತು ಜೋಡು ನೂಲಿನ ಕೋಟಿಂಗುಗಳಿ... Johari Bazar, Jaipur City.
9. Madan Khadi Kutir, Baroli, Rajputana. (ಇ... ವಿಶೇಷವಾಗಿ ಧೋತಿ, ಶರ್ಟಿಂಗ್ ಮತ್ತು ಕೋಟಿಂಗ್ ವಸ್ತ್ರವು ಮಾರಲ್ಪಡುತ್ತದೆ,)

ಮದ್ರಾಸ್ ಸಂಸ್ಥಾನ.

ಉತ್ತಮ ರೀತಿಯ ಎಲ್ಲಾ ವಿಧದ ಖಾದಿಗಳು ಇಲ್ಲಿ ಸಿಗುತ್ತವೆ.

10. All India Spinner's Association, Tam... Nadu Branch, Tirupur, S. I. Rly
11. Kangoo Khadder Company, Ltd., Tirpur.
12. All India Spinner's Association, Fi... Khadi Depot, Chicacole B. N. Railway.
13. All India Spinner's Association, Andhr... Branch, Masulipatam.

ಇಲ್ಲಿ ಅಚ್ಚಾಗಿ ರಂಗು ಕೊಟ್ಟಿರುವ ಉತ್ತಮ ವಸ್ತ್ರಗಳು ಸಿಗುತ್ತವೆ.

ಸ್ವದೇಶೀಯೋ ಸ್ವರಾಜ್ಯವು.

ಮಂಗಳೂರಲ್ಲಿ Indian Chemical Industry ಎಂಬ ವ್ಯಾಪಾ... ಸಂಸ್ಥೆಯು ಸ್ಥಾಪಿತವಾಗಿದೆ. ಇದರಲ್ಲಿ ಪನ್ನೀರು, ಶಾಯಿ, ಟೂತ್ ಪೌಡರ್, ಟೂ... ಪೇಸ್ಟ್ ಮೊದಲಾದ ಸಾಮಾನುಗಳು ಸಂಪೂರ್ಣ ಸ್ವದೇಶೀಯಾಗಿ ತಯಾರಾಗುತ್ತವೆ.

ಹೆಚ್ಚಿನವರು ನಮ್ಮ ಚಂದಾ ಹಣವನ್ನು ಪಾವ... ಮಾಡಿದ್ದಾರೆ ಆದರಂತೆ ಉಳಿದವರೂ ಈ ಸಂಚಿಕೆಯನ... ವಿ. ಪಿ ಯೆಂದು ಭಾವಿಸಿ ಹಣವನ್ನು ಪಾವತಿ ಮಾ... ಬೇಕಾಗಿ ಸವಿನಯ ವಿನಂತಿ.

ಮೆನೇಜರ್

"Service of the Poor is the Service of God".

ವಾರ್ಷಿಕ ಚಂದಾ ಒಂದು ರೂಪಾಯಿ ಮಾತ್ರ!!! ಅಂಚೆವೆಚ್ಚ ನಾಲ್ಕಾಣೆ.

A HIGH CLASS RUPEE-MAGAZINE TO SUIT ALL INTERESTS.

ಭಿನ್ನರುಚಿಗೊಪ್ಪುವ ಕನ್ನಡ ಮಾಸಪತ್ರಿಕೆ. [ಬಿಡಿ ಸಂಚಿಕೆ ಆಣೆ ೦—೧—೬.

ಓಂ

BADAVARA BANDHU

ಬಡವರಬಂಧು

EDITOR:—MANGALORE JARAPPA. ASSOCIATE EDITOR:—B. NARSAPPA.

"ಬಡವರ ಬಂಧು"ವಿನಲ್ಲಿ ಉಚ್ಚ ತರಗತಿಯ ಸಣ್ಣ ಕಥೆಗಳೂ, ಪದ್ಯಗಳೂ, ಧಾರ್ಮಿಕ ನೈತಿಕ ವಿಚಾರಗಳನ್ನೊಳಗೊಂಡ ಲೇಖಗಳೂ ಬರುವುವು. ಪತ್ರವ್ಯವಹಾರ, ಹಾಸ್ಯ, ವಿಮರ್ಶೆ, "ಟಿಟ್‌ಬಿಟ್ಸ್," ಒಳದೇಶವಿದೇಶ ವಾರ್ತೆಗಳೂ ಕೊಡಲ್ಪಡುವುವು.
ಇಂತಹ ಅಮೂಲ್ಯ ಮತ್ತು ಅತೀ ಅಗ್ಗವಾದ ಮಾಸಿಕ ಪತ್ರಿಕೆಯನ್ನು

"ಬಡವರಬಂಧು" ಕಾರ್ಯಾಲಯ, ಹಂಪನಕಟ್ಟೆ, ಮಂಗಳೂರು, ಇಲ್ಲಿಂದ ತರಿಸಿಕೊಳ್ಳಿರಿ.

ಸಂಪುಟ ೧. | ತಾರೀಕು ೧ನೇ ಜುಲಾಯಿ ೧೯೩೨. | ಸಂಚಿಕೆ ೩.

ಬಡವರಾದರೆ-

ಕುಲದೊಳ್, ಕೂತರು,
ಕೂಸನೀಯರು;
ನೃಪರ್ ನಿಷ್ಕಾರಣಂ ದಂಡಿಪರ್.
ನೆಲೆಯೊಳ್ ಸೇರಲು ಪೋರುಗೈದು
ಸತಿತಾಂ ಪೋಗಟ್ಟುವಳ್.
ಸಾಲಿಗರ್ ಕಲುಗುಂಡಂ ತಲೆಗೇರಿಪರ್.
ತೊಲಗಿರಲ್ ಲಕ್ಷ್ಮೀಕಟಾಕ್ಷೇಕ್ಷಣಂ,
ನೆಲಮುಟ್ಟಲ್ ಮುನಿದಪ್ಪುದೈ!
ಹರ ಹರಾ ಶ್ರೀಚೆನ್ನ ಸೋಮೇಶ್ವರಾ!

ಅನುಕ್ರಮಣಿಕೆ.